



**IMAGINARY MAP OF KUMARI KANDAM / LEMURIA**

# Lemuria: Nidhiya vidhi

## ಲೆಮೂರಿಯಾ: ನಿಧಿಯ ವಿಧಿ

### ರಹಸ್ಯ ಖಂಡದ ಭೂಗತ ಕಥೆ

**ನಾಗೇಶ್ ಕುಮಾರ್ ಸಿಎಸ್**

© Nagesh Kumar CS

All rights reserved. No parts of this publication may be reproduced, stored in a retrieval system, or transmitted, in any form or by any means, electronic, mechanical, photocopying, recording, or otherwise, without the prior permission of the author.

Published By Nagesh Kumar CS

# Contents


Title Page ii
Copyright iii
Title 1

# ಲೆಮೂರಿಯಾ: ನಿಧಿಯ ವಿಧಿ

## ಲೆಮೂರಿಯಾ - ನಿಧಿಯ ವಿಧಿ- 1

**1**

ಇಸವಿ. 1550 ಏಪ್ರಿಲ್ 10- ಹಿಂದೂ ಮಹಾಸಾಗರದಲ್ಲಿ ಎಲ್ಲೋ...

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಸ್ಯಾಂಟೀಯಾಗೊ ಎಂಬ ಹೆಸರಿನ ಸ್ಪೇನ್ ಬಾವುಟ ಹಾರಿಸುತ್ತಿದ್ದ ಹಡಗಿನ ಕ್ಯಾಪ್ಟನ್ ಸಾಂಚೆಜ್ ಅದರ ಡೆಕ್ ಮೇಲೆ ನಿಂತು ತಿಳಿಮೋಡಗಳಿದ್ದ ಆಗಸ ನೋಡಿ ಒಮ್ಮೆ ವಿಜಯದ ನಗೆ ಬೀರಿದನು. ಆದಕ್ಕೆ ಕಾರಣವೂ ಇಲ್ಲದಿರಲಿಲ್ಲ. ಈ ಉತ್ತಮ ಹವೆ ಒಂದು ಚಿಕ್ಕ ಸುದೈವ ಅಷ್ಟೇ!

ಮುಖ್ಯವಾಗಿ ಎರಡು ತಿಂಗಳ ಕಾಲದ ಒಂದು ಐತಿಹಾಸಿಕ ಅಮಾನುಷ ಸಾಹಸದಲ್ಲಿ ಜಯಗಳಿಸಿ ಅವನು ಈ ಹಿಂದೂ ಸಾಗರದ ಚಿಕ್ಕಚಿಕ್ಕ ಹವಳ ದ್ವೀಪಗಳ ಸಮೂಹದಿಂದ ತನ್ನ ತಾಯ್ನಾಡಿಗೆ ಹಿಂತಿರುಗುತ್ತಿದ್ದನು. ತನ್ನ ಹಡಗಿನ ಹಿಂದೆಯೇ ಇನ್ನೂ ಹಾನಿಯಾಗದೇ ಭರಪೂರ ಭಾರ ಹೊತ್ತ ತಮ್ಮದೇ ಆದ ಸ್ಯಾನ್ ಬೆತ್ ಹಡಗು ಸಹಾ ತೇಲಿಬರುತ್ತಿತ್ತು...

ಈ ಸಾಗರದ ನೀರನ್ನು ಬ್ಲೂ ಗೋಲ್ಡ್ ಅಥವಾ ನೀಲಿ ಬಂಗಾರ ಎನ್ನುತ್ತಾರೆ ನಾವಿಕರು. ಆದರೆ ತನ್ನ ಬಳಿ ನಿಜವಾದ ಚಿನ್ನವೇ ಇತ್ತಲ್ಲ! ಅದೂ ಯಾರೂ ಊಹಿಸಲಾರದಷ್ಟು ಅಗಾಧ ಪ್ರಮಾಣದಲ್ಲಿ. ತನಗೆ ಮತ್ತು ತನ್ನ ಆಯಾಸ ಮತ್ತು ರೋಗದಿಂದ ನರಳುತ್ತಿದ್ದ ಸಿಬ್ಬಂದಿಗೆ ಲೆಕ್ಕವೂ ಹಾಕಲಾರದಷ್ಟು ಅಪಾರ!

ಎರಡೂ ವರ್ಷಗಳಿಂದ ಸ್ವಲ್ಪವೂ ವಿರಾಮವಿಲ್ಲದೇ ಸಮುದ್ರದಲ್ಲಿ ಅವಿರತ ದುಡಿದಿದ್ದವರ ಮಾನಸಿಕ ಸ್ಥಿತಿ ಸ್ವಾಸ್ಥ್ಯದ ಅಪಾಯದ ಅಂಚಿಗೆ ತಲುಪಿತ್ತು. ಕೆಲವರನ್ನಂತೂ ಆ ದ್ವೀಪದಲ್ಲಿ ಹೂತು ಬರಬೇಕಾಗಿ ಬಂದಿತ್ತು.

ಅವರಲ್ಲೊಬ್ಬನ್ನು ಹೂತಾಗ ಮಾತ್ರ ಕ್ಯಾಪ್ಟನ್ ಆದ ತನಗೆ ತೀರಾ ದುಃಖವಾಗಿತ್ತು. ಅವನೂ ತಾವು ಕೊಟ್ಟಿದ್ದ ಚಿತ್ರಹಿಂಸೆಯಿಂದ ಸಾಕಷ್ಟು ನರಳಿದ್ದ. ಅಲ್ಲದೇ ಎಲ್ಲರಂತೆ ಅವನಿಗೂ ಧೀರ್ಘ ಪಯಣದಿಂದ ಕಡಲುರೋಗ (ಸೀ ಸಿಕ್ನೆಸ್) ತಗುಲಿತ್ತು. ಅವನೇ ಭೌದ್ಧ ಭಿಕ್ಕು ಸಾಮನೆರಾ..

ಆದರೆ ಅವನಿಂದ ಬೇಕಿದ್ದ ಅತ್ಯಮೂಲ್ಯ ಮಾಹಿತಿಯಿಂದ ಈ ಕೊನೆಯಿಲ್ಲದ ಸಾಗರದ ನಡುವಿನ ಆ ಚಿಕ್ಕ ದಿವೇಹಿನಾ ದ್ವೀಪವನ್ನು ಕೊನೆಗೂ ಪತ್ತೆ ಹಚ್ಚಿದ್ದರು.

ಮೂಲತಃ ಬೌದ್ಧ ಬಿಕ್ಕುಗಳಿಗೆ ಮುಖ್ಯಸ್ತನಾಗಿದ್ದ ಸಾಮನೆರಾ ವಶದಲ್ಲಿ ಅತ್ಯಂತ ಗೋಪ್ಯ ಮತ್ತು ಪುರಾತನ ರಹಸ್ಯವಾದ ಲೆಮೂರಿಯಾ ಖಂಡದ ಪಳೆಯುಳಿಕೆಗಳ ನಕ್ಷೆ ಸಹಾ ಇತ್ತು!
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ಹಲವು ಲಕ್ಷ ವರ್ಷಗಳ ಕೆಳಗೆ ಇದ್ದಿತೆನ್ನಲಾದ ಸ್ವರ್ಗದಂತಹಾ ಭೂಖಂಡ ಲೆಮೂರಿಯಾ, ಆ ಕಾಲದಲ್ಲೆ ದೊಡ್ಡ ಪ್ರಳಯದ ಸಮಯದಲ್ಲಿ ಸಂಪೂರ್ಣ ನಾಶವಾಗಿ ಸಮುದ್ರದ ತಟ ಸೇರಿತ್ತು. ನಿಜ ಪಾಶ್ಚಿಮಾತ್ಯರಲ್ಲಿ ಯಾರಿಗೂ ಈ ಕಟ್ಟುಕತೆಯಲ್ಲಿ ನಂಬಿಕೆಯಿರಲಿಲ್ಲ. ಸಾಂಚೆಜ್ ತರಹದ ಕೆಲವು ಕಡಲು ಪುರಾಣದ ಹುಚ್ಚರನ್ನು ಬಿಟ್ಟು!

ಕೊನೆಗೂ ಆ ಶತಪ್ರಯತ್ನದ ಲಾಭ ದೊರಕೇ ದೊರೆತಾಗ ಸಾಂಚೆಜ್ ಹುಚ್ಚನಂತೆ ನಕ್ಕಿದ್ದ, ಕುಣಿದಿದ್ದ, ಉರುಳಾಡಿ ಅತ್ತಿದ್ದ ಆ ದ್ವೀಪದಲ್ಲಿ ಆ ನಂಬಲಸಾಧ್ಯವಾದ ಬಂಗಾರದ ಕೋಟೆ ಗೋಡೆಗಳ ಸಂಪತ್ತನ್ನು ಕಂಡು. ಅದೇನೂ ಈಗಿನ ಕಾಲದ 24-ಕ್ಯಾರೆಟ್ ಲೆಕ್ಕದ ಬಂಗಾರವಲ್ಲ. ಹಿಂದೊಂದು ಯುಗದಲ್ಲಿ ನಿರ್ಮಿತ ಚಿನ್ನದ ಎರಡು ಮೂರು ಅಡಿ ದಪ್ಪದ ಸಾಲಿಡ್ ಚಿನ್ನದ ಗೋಡೆಯ ತುಂಡುಗಳು. ಅದರ ಪ್ಯೂರಿಟಿಗೆ ಈಗ ಮಾನದಂಡವಿಲ್ಲ!

ನಿಶ್ಯಕ್ತನಾದ ಸಾಮೆನೆರಾ ಕೊನೆಗೊಮ್ಮೆ ಸಾಂಚೆಜ್ ಮತ್ತು ಅವನ ನಿತ್ರಾಣವಾದರೂ ಹಸಿದ ನಾವಿಕರನ್ನು ಆ ದ್ವೀಪದ ರಹಸ್ಯ ಗುಹೆಗೆ ಕರೆದೊಯ್ದಾಗ ಅಲ್ಲಿ ಅವರಿಗೆ ಪೈಶಾಚ ಹಿಡಿಯುವುದೆಂದು ಬಾಕಿ ಆಪಾಟಿ ಬಂಗಾರ ಕಣ್ಣು ಕೋರೈಸಿತ್ತು. ಅದನ್ನು ಕಾವಲು ಕಾಯುತ್ತಿದ್ದ ಈಟಿ ಭರ್ಜಿ ಮಾತ್ರ ಹಿಡಿದಿದ್ದ ಕೆಲವೇ ಆದಿವಾಸಿಗಳನ್ನು ಕಣ್ಣು ಮಿಟುಗಿಸುವ ಮುನ್ನ ಕೊಂದು ಅವರ ಹೆಣಗಳನ್ನು ಮೆಟ್ಟಿ ಸಾಗಿದ್ದರು. ಆ ನಾವಿಕರ ಹುಚ್ಚು ಆನಂದದ ನಡುವೆ ಸಾಮೆನೆರಾ ಸತ್ತು ಬಿದ್ದಿದ್ದು ಗೊತ್ತಾಗಿದ್ದೇ ಮುಂದಿನ ದಿನ ಕುಡಿದು ಬಿದ್ದಿದ್ದ ಎಲ್ಲರ ಅಮಲು ಇಳಿದಾಗ.

ಆಮೇಲೆ ಒಂದು ವಾರದ ಕಾಲ ತಗುಲಿದ್ದು': ತಮ್ಮ ಹಡಗಿನ ಗುಲಾಮರೂ, ಮತ್ತು ಆ ದ್ವೀಪದ ಆದಿವಾಸಿಗಳಿಗೆ ಯಮಶಿಕ್ಷೆಯಾಗುವಂತಾ ಕಷ್ಟಪಟ್ಟು ಆ ಬಂಗಾರದ ಗಟ್ಟಿಗಳನ್ನು ಗುಹೆಯಿಂದ ಎರಡು ಮೂರು ಕಿ.ಮೀ. ಸಾಗರದ ದಡದಲ್ಲಿ ಲಂಗರು ಹಾಕಿದ್ದ ಸ್ಯಾಂಟಿಯಾಗೋ ಮತ್ತು ಸ್ಯಾನ್ ಬೆತ್ ಎರಡೂ ಹಡಗುಗಳಿಗೆ ಸಾಗಿಸಲು! ತಳ್ಳುಗಾಡಿಗಳಲ್ಲಿ ಸ್ವಲ್ಪ, ಅಲ್ಲಿದ್ದ ಮ್ಯೂಲ್ ಕತ್ತೆಗಳ ಬೆನ್ನು ಮುರಿಯುವಂತೆ ಇನ್ನಷ್ಟು ಮಿಕ್ಕಿದ್ದು ಹೊತ್ತಿದ್ದ ಗುಲಾಮರ ಬೆನ್ನೇ ಡೊಂಕಾಗುವಷ್ಟು ಪ್ರಮಾಣದ ಚಿನ್ನದ ಸಾಗಣಿಕೆಯಾಗಿತ್ತು.

ಹಲವರು ಆ ಅಸಾಧ್ಯ ಶ್ರಮಕ್ಕೆ ತಾವಾಗಿಯೇ ಸತ್ತರು. ಮಿಕ್ಕವರನ್ನು ನಾವಿಕರ ಕಾವಲುಗಾರರು ನಿರ್ದಯವಾಗಿ ಕೊಂದರು. ಪ್ರಾಚೀನ ಸಂಪತ್ತಿನ ಆಡಗುತಾಣವಾಗಿದ್ದ ಆ ನತದೃಷ್ಟ ದಿವೇಹಿನಾ ದ್ವೀಪವೇ ಇಂದು ಅವರ ಸಾಮೂಹಿಕ ಸ್ಮಶಾನವಾಗಿತ್ತು. ಹೆಚ್ಚು ಜನ ಉಳಿದಷ್ಟೂ ಹೆಚ್ಚು ಪಾಲಾಗುತ್ತಿತ್ತಲ್ಲ ಆ ಅಮೂಲ್ಯ ಬಂಗಾರ?.. ಹಾಗಾಗಿ ಅಲ್ಲಿ ಸ್ವಾರ್ಥ ಮತ್ತು ಕ್ರೌರ್ಯ ತಾನೇ ತಾನಾಗಿ ಮಿತಿಯಿಲ್ಲದೇ ಮೆರೆದಿತ್ತು...

ಕ್ಯಾಪ್ಟನ್ ಸಾಂಚೆಜ್ ಡೆಕ್ ಇಳಿದು ಯಾವಾಗ ತನ್ನ ಕ್ಯಾಬಿನ್ನಿಗೆ ಹೋಗಿ ಆ ಸಂಜೆಯ ಮೊದಲ ಪೆಗ್ ವಿಸ್ಕಿ ಗುಟುಕರಿಸುತ್ತಿದ್ದನೋ, ಆಗ ಹಡಗು ವಿಲಕ್ಷಣವಾಗಿ ಓಲಾಡಿತ್ತು. ಆಗಲೇ ನೌಕೆಯ ಎಚ್ಚರಿಕೆ ಗಂಟೆ ಆರ್ತನಾದದಂತೆ ಬಡಿಯಲಾರಂಭಿಸಿತ್ತು.

ಕ್ಯಾಪ್ಟನ್ ಮತ್ತು ಅವನ ಹಿರಿಯ ಸಿಬ್ಬಂದಿ ಏನಾಯಿತೆಂದು ನೋಡಲು ಮೇಲಿನ ಡೆಕ್ಕಿಗೆ ಬಂದಾಗ ಅವರಿಗೆ ಎದೆಝಲ್ಲೆನಿಸುವ ದೃಶ್ಯ ಕಂಡಿತ್ತು.

ಎದುರಿಗೆ ದಿಗಂತ ಇದ್ದಕ್ಕಿದಂತೆ ಕಾರ್ಮುಗಿಲಲ್ಲಿ ಮುಚ್ಚಿ ಹೋಗಿತ್ತು. ಸ್ಯಾನ್ ಬೆತ್‌ನ ಕ್ಯಾಪ್ಟನ್ ಡೈಗೋ ಸಹಾ ಆತಂಕದಿಂದ ಕೈಮಾಡಿ ಪಶ್ಚಿಮದಿಕ್ಕಿಗೆ ತೋರಿಸುತ್ತಿದ್ದನು.

ಅದೇನು? ಓಹ್ ಜೀಸಸ್! ಬೆಟ್ಟವೋ ಪೆಡಂಭೂತವೋ ಎನ್ನುವಂತೆ ದೈತ್ಯ ಅಲೆ!...ಇದುವೇ ಸುನಾಮಿಯೇ?...ಅಯ್ಯೋ ವಿಧಿಯೆ ! ಸ್ವಲ್ಪ ಹೊತ್ತಿನ ಕೆಳಗೆ ಏನೂ ತೊಂದರೆ ಇರಲಿಲ್ಲವಲ್ಲ...

ಆ ರಕ್ಕಸಾಕಾರದ ಅಲೆ ಮತ್ತು ಜಲರಾಶಿ ತಮ್ಮನ್ನು ನುಂಗಲೆಂದೆ ವೇಗವಾಗಿ ನುಗ್ಗಿ ಬರುತ್ತಿದೆ ಎನಿಸಿತು ಅವರಿಗೆ.

ಅದೇಕೋ ಆಗ ಕ್ಯಾಪ್ಟನ್ ಸಾಂಚೆಜ್‌ಗೆ ಚಿತ್ರಹಿಂಸೆಯಿಂದ ನರಳಿದ ಬೌದ್ಧ ಬಿಕ್ಕು ಸಾಮೆನೆರಾ ಕೊಟ್ಟಿದ್ದ ಕೊನೆ ಎಚ್ಚರಿಕೆ ಮಾತು ಕಿವಿಯಲ್ಲಿ ಮಾರ್ದನಿಸಿತ್ತು.

"ಬೇಡ..ಲೆಮೂರಿಯಾದ ನಿಧಿ ಎಂದಿಗೂ ಮುಟ್ಟಬೇಡ...ಅದರ ಹಿರಿಯ ಜ್ಞಾನಿ ಆತ್ಮಗಳು ಈ ಕಡಲಲ್ಲಿ ಸುತ್ತುತ್ತಿವೆ. ಅವರು ಅತಿಮಾನುಷರು. ನಿಮ್ಮನ್ನು ಈ ನಿಧಿ ಕದ್ದೊಯ್ಯಲು ಬಿಡುವುದಿಲ್ಲ... ಇದು ಅವರದ್ದು!" ಎಂದು ಅಂಗಲಾಚಿದ್ದ.

ಆಗ ತಾವೆಲ್ಲರೂ ಆ ಬಡಪಾಯಿಯ ಸುತ್ತ ಕುಡಿದ ಅಮಲಿನಲ್ಲಿ ನಗಾಡಿ ಕೇಕೆ ಹಾಕಿದ್ದೆವು... ಆದರೆ ಈಗ?

ಐದೇ ನಿಮಿಷವೂ ಆಗಿರಲಾರದು...ಸ್ಯಾಂಟಿಯಾಗೋ ಮತ್ತು ಸ್ಯಾನ್ ಬೆತ್ ಹಡಗುಗಳ ಪಾಲಿಗೆ ಮೃತ್ಯುಸ್ವರೂಪವಾಗಿ ಹುಟ್ಟಿದ ದೈತ್ಯಾಲೆಯ ಸಹಸ್ರಗಟ್ಟಲೆ ಗಾಲನ್ ನೀರು ಶಾಪದಂತೆ ಬಂದೆರಗಿತ್ತು.

ಆ ಕಾಲಕ್ಕೆ ಬಲಿಷ್ಟವಾಗಿ ಕಟ್ಟಲ್ಪ|ಟ್ಟಿದ್ದೆನ್ನಲಾದ ಆ ಎರಡೂ ಹಡಗುಗಳು ಆ ಹೊಡೆತಕ್ಕೆ ಮಕ್ಕಳಾಟಿಕೆಯಂತೆ ಸಾಗರದಲ್ಲಿ ಚಿಪ್ಪಾಚೂರಾಗಿ ಮುರಿದು ಬಿದ್ದವು. ಎರಡೂ ಹಡಗುಗಳನ್ನೂ ಅದರಲ್ಲಿದ್ದ ಸಿಬ್ಬಂದಿ ಮತ್ತು ನಿಧಿಯನ್ನು ಸಮುದ್ರವೇ ಆಪೋಶನ ತೆಗೆದುಕೊಂಡು ನುಂಗಿ ಹಾಕಿತ್ತು!

ಮತ್ತಿನ್ನು ಹತ್ತು ನಿಮಿಷದಲ್ಲಿ ಆ ಜಲರಾಶಿ ಸಾಧಾರಣ ಸ್ಥಿತಿಗೆ ಇಳಿದಾಗ ಮುಸ್ಸಂಜೆ ಮಬ್ಬು ಬೆಳಕಲ್ಲಿ ಅಲೆಗಳು ತಮಗೆ ಈ ದುರಂತವೇನೂ ಅರಿಯದೆಂಬಂತೆ ಶಾಂತವಾಗಿ ಮುಗುಳ್ನಗುತ್ತಿದ್ದಂತಿತ್ತು.

2

ವರ್ಷ 2017. ಕೊಚ್ಚಿ

ಕೊಚ್ಚಿಯ ಪೋರ್ಟ್ ಟ್ರಸ್ಟ್ ಕಾಂಪ್ಲೆಕ್ಸ್ ನೆಲಮಾಳಿಗೆಯಲ್ಲೊಂದು ಸುಸಜ್ಜಿತ ಕಿರು ಕಚೇರಿಯಿದೆ. ಇದನ್ನು ಇಂಡಿಯನ್ ಅಂಡರ್-ವಾಟರ್ ರಿಸರ್ಚ್ ಇನ್ಸಿಟ್ಯೂಟ್ ಎಂಬ ಸಾಧಾರಣ ಹೆಸರಿನಿಂದ ಕರೆಯಲಾಗುತ್ತದೆ. ಆದರೆ ಅದರ ವ್ಯಾಪ್ತಿ ಮತ್ತು ಕಾರ್ಯ ನಿರ್ವಹಣೆ ಅಧಿಕಾರ ಮತ್ತು ಶಕ್ತಿ, ಗೃಹ ಸಚಿವಾಲಯ ಮತ್ತು ಇಂಡಿಯನ್ ನೇವಿಯ ವರಿಷ್ಟ ಅಧಿಕಾರಿಗಳಿಗೆ ಮಾತ್ರ ತಿಳಿದಿದೆ.

ಅದರ ಮುಖ್ಯಧಿಕಾರಿ ಡಾ. ದೇಸಾಯಿ ಅಂದು ಬೆಳಿಗ್ಗೆಯ ಇ-ಮೈಲಿನಲ್ಲಿ ಬಂದ ಮುಖ್ಯ ಲೇಖನವನ್ನು ಕಣ್ಣು ಕಿರುದಾಗಿಸಿಕೊಂಡು ಓದಿ ಕಣ್ಣುಜ್ಜಿಕೊಂಡು ಉಫ್ ಎಂದು ನಿಟ್ಟುಸಿರಿಟ್ಟರು.

ಡಾ. ಪ್ರಮೋದ್ ದೇಸಾಯಿಗೆ 60 ವರ್ಷ. ಅವರು ನೇವಲ್ ಸೀಕ್ರೆಟ್ ಸರ್ವೀಸ್, ಆರ್ಕಿಯಾಲಜಿ ಹೀಗೆ ವೈವಿಧ್ಯಮಯ ಇಲಾಖೆ ಹಾಗೂ ವಿಷಯಗಳಲ್ಲಿ ಸಾರ್ವಜನಿಕರಿಗೆ ಎಲೆ ಮರೆ ಕಾಯಿಯಂತೆ ದೇಶಕ್ಕೆ ಅವಿರತ ಸೇವೆ ಸಲ್ಲಿಸಿದವರು. ಅವರನ್ನು ಅವರೆಡೂ ವಿಷಯಗಳಲ್ಲಿ ಅಥಾರಿಟಿ ಎಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ವಲ್ಪ ತಿಳಿದವರೂ ಸಹಾ ಗೌರವಿಸುವರು. ಇಂದು ಈ ಗುಪ್ತಸಂಸ್ಥೆಯ ಚೇರಮನ್!

ಆದರೆ ಇವತ್ತು ಓದಿದ ವಿಚಾರ ಅತ್ತ ಅಂಡರ್-ವಾಟರ್ ಟೆಕ್ನಾಲಜಿಯೂ ಅಲ್ಲ, ಇತ್ತ ಆರ್ಕಿಯಾಲಜಿ/ ಪುರಾತತ್ವ ಇಲಾಖೆಯದ್ದೂ ಅಲ್ಲ. ಇದೊಂದು ಸ್ಮೃತಿಗೆಟುಕದ ವೈಜ್ಞಾನಿಕವಾಗಿ ನಂಬದ ಕಡಲು ಪುರಾಣ ಎನ್ನಬಹುದು.

ಆದಕ್ಕೇ ಅವರು ತಮ್ಮ ಚೀಫ್ ಆಪರೇಟಿಂಗ್ ಆಫೀಸರ್ ಆದ, ಇಂತಾ ವಿಚಾರಗಳಲ್ಲಿ ಪರಿಣಿತನಾದ ಕ್ಯಾಪ್ಟನ್ ಅವಿನಾಶ್ ನಾಯಕ್‌ಗೆ ಕಾಲ್ ಮಾಡಿ ತಮ್ಮ ಬಳಿ ಕರೆಸಿದರು. 32 ವರ್ಷ ವಯಸ್ಸಿನ ಆಜಾನುಬಾಹು ಸಾಹಸಿ ಅಧಿಕಾರಿ ಮಂಗಳೂರಿನ ಅವಿನಾಶ್ ಭಾರತೀಯ ನೌಕಾಪಡೆಯ ಸ್ಪೆಶಲ್ ಫೋರ್ಸಸ್ ಸೆಲ್ ಸೇವೆಯಲ್ಲಿದ್ದವನನ್ನು ಡಾ.ದೇಸಾಯಿ ಹತ್ತಿರದಿಂದ ಬಲ್ಲರು. ಅವನಿಗೂ ಇವರ ಬಗ್ಗೆ ಗುರುಗಳು ಎನಿಸುವಂತಾ ಗೌರವಾದರ ಹಲವು ವರ್ಷ ರಹಸ್ಯ ಮಿಶನ್‌ಗಳಲ್ಲಿ ಜಂಟಿಯಾಗಿ ಕೆಲಸ ಮಾಡಿದ್ದುದ್ದರ ಫಲವಾಗಿ ಬೆಳೆದಿದೆ.

ಈಗ ದೇಸಾಯಿ ಒಂದು ವರ್ಷದಿಂದ ತಾವು ಆರಂಭಿಸಿದ ಈ ವಿಶೇಷ ಸಂಸ್ಥೆಗೆ ಡೆಪ್ಯುಟೇಷನ್ ಮೇಲೆ ಅವನನ್ನು ಕರೆಯಿಸಿಕೊಂಡಿದ್ದರು.

ಎದುರು ಚೇರಿನಲ್ಲಿ ಕುಳಿತ ಕ್ರೂ ಕಟ್ ಕಪ್ಪು ಕೂದಲಿನ ಆರು ಅಡಿ ಎತ್ತರದ ಶಕ್ತಿಶಾಲಿ ಮೈಕಟ್ಟಿನವನ ಕಂಗಳಲ್ಲಿ ಅದೆಂತದೋ ಅದಮ್ಯ ಉತ್ಸಾಹ, ಸೋಲದ ವಿಶ್ವಾಸ ಕಂಡು ಡಾ ದೇಸಾಯಿ ಪ್ರಸನ್ನರಾದರು.

“ಲೆಮೂರಿಯಾ?” ಎಂದು ಯಾವುದೇ ಪೀಠಿಕೆಯಿಲ್ಲದೆ ಆ ಪದವನ್ನು ಅವನತ್ತ ಎಸೆದರು ಡಾ.ದೇಸಾಯಿ. ಇದು ಅವರಿಬ್ಬರ ಸಾಮಾನ್ಯ ಸಂಭಾಷಣಾ ಶೈಲಿ!

“ಮತ್ತೇಕೆ ಭಾಧಿಸುತ್ತಿದೆ ಈ ‘ಕಟ್ಟುಕತೆ’ ನಿಮ್ಮ ಪಾಲಿಗೆ?...ನಿಮ್ಮನ್ನು ನಂಬಿಸಲು ನನಗಾಗಿಲ್ಲವಲ್ಲ?” ಎಂದು ಸೊಟ್ಟನಗೆ ಬೀರಿ ಕೈ ಚೆಲ್ಲಿದನು ಅವಿನಾಶ್ ನಾಯಕ್.

“ಅದೆಲ್ಲಾ ಆಮೇಲೆ!” ಡಾ.ದೇಸಾಯಿ ಅವನನ್ನು ದಿಟ್ಟಿಸಿದರು ಅರ್ಥಗರ್ಭಿತವಾಗಿ.”ನೀನು ಮತ್ತೆ ಮೊದಲಿಂದ ಹೇಳುತ್ತಾ ಹೋಗು...”

“ಸರಿ ಹಾಗಾದರೆ” ಹೊಸದೇನೋ ಬೆಳವಣಿಗೆಯಾಗಿದೆ ಈ ಬಗ್ಗೆ, ಅವರೇ ಹೇಳುತ್ತಾರೆ ಎಂದುಕೊಂಡು ಸಾವಧಾನವಾಗಿ ಆರಂಭಿಸಿದ ಅವಿನಾಶ್.


“...ಈ ಭೂಮಿ ಶೈಶವಾವಸ್ಥೆಯಲ್ಲಿದ್ದಾಗ ಅಂದರೆ ಈ ಯುಗಗಳಿಗೂ ಮುಂಚಿನ ಕತೆಯಿದು...ಭೂಮಿಯಲ್ಲಿ ಭೂ-ಭಾಗ ಈಗಿನ ನಕ್ಷೆಯ ಖಂಡಗಳಂತಿರಲಿಲ್ಲ... ಅವೆಲ್ಲಾ ಆ ಮಹಾ ಜಲಪ್ರಳಯದ ನಂತರ ಬೇರೆ ಬೇರೆಯಾದವು. ಇದನ್ನು ಕಾಂಟಿನೆಂಟಲ್ ಡ್ರಿಫ್ಟ್ ಎಂದು ಕರೆಯುತ್ತೇವೆ. ಅದಕ್ಕೆ ಬೈಬಲ್ಲಿನಲ್ಲಿ ಜೆನೆಸಿಸ್ ಫ್ಲಡ್ ಎಂದೂ ಕರೆದ ಕತೆಯ ಹಿನ್ನೆಲೆಯೂ ಇದೆ.

ಈಗಿನ ಭಾರತದ ಉಪಖಂಡಕ್ಕೆ ಅಂಟಿದಂತೆ ಅತ್ಯಂತ ವಿಶಾಲವಾದ ಸಮೃದ್ಧವಾದ ಭೂಪ್ರದೇಶವೊಂದಿತ್ತು. ಅದನ್ನು ನಾವು ಲೆಮೂರಿಯಾ ಎಂದು ಕರೆಯುತ್ತೇವೆ.

ಅವರು ಏನು ಕರೆಯುತ್ತಿದ್ದರೋ ಗೊತ್ತಿಲ್ಲ... “

”ಹಾಗಾದರೆ ಕುಮರಿ ಖಂಡಂ ಎನ್ನುತ್ತಿದ್ದೆಯಲ್ಲ ಹೋದ ಸಲ?” ಡಾ ದೇಸಾಯಿ ಕಣ್ಮುಚ್ಚಿ ಕೇಳಿದರು.

“ಅದು ಇನ್ನೊಂದು ಉಪಕತೆ” ತಾಳ್ಮೆಯಿಂದ ವಿವರಿಸಿದ ಅವಿನಾಶ್. “ತಮಿಳಗಂ ಎಂಬ ಮಹಾ ಸಾಮ್ರಾಜ್ಯವು ಋಷಿ ಅಗಸ್ತ್ಯರು ಕಟ್ಟಿದ ನಾಡಾಗಿ ವೈಭವಯುತವಾಗಿ ಅಪೂರ್ವ ಬೆಳವಣಿಗೆ ಕಂಡಿದ್ದ ಧ್ರಾವಿಡ ಹಿರಿಮೆಯ ಕತೆಯದು. ಅದುವೇ ಲೆಮೂರಿಯಾ, ಅಥವಾ ಅದರ ಒಂದು ಭಾಗ, ಒಂದು ರಾಜ್ಯ ಎಂದು ತಮಿಳಿನ ಇತಿಹಾಸಕಾರರೂ, ಕವಿವರೇಣ್ಯರೂ ಮತ್ತೆ ಮತ್ತೆ ದಾಖಲಿಸಿದ್ದಾರೆ. ಅದನ್ನು ಸದ್ಯಕ್ಕೆ ಪಕ್ಕಕ್ಕಿಡೋಣ. ಅದಕ್ಕೆ ಆಮೇಲೆ ಬರುತ್ತೇನೆ...



IMAGINARY MAP OF KUMARI KANDAM / LEMURIA

"...ಈ ಲೆಮೂರಿಯಾ ಇದ್ದ ಕಾಲ ಘಟ್ಟದಲ್ಲಿ ಭೂಮಿ ಈಗಿದ್ದಂತೆ ಇರಲೇ ಇಲ್ಲ. ಅದು ಒಂದು ಸ್ವರ್ಗದಂತಾ ಆರೋಗ್ಯಕರ ಸುಂದರಾತಿಸುಂದರ ಗ್ರಹವಾಗಿತ್ತು. ಈಗ ನಾವು ನೋಡುವ ಬೇಸಗೆ, ಚಳಿಗಾಲಗಳ ವೈಪರೀತ್ಯವಿರಲಿಲ್ಲ. ಹವೆಯು ಬಹಳ ಪರಿಶುದ್ಧವಾಗಿ, ಹೆಚ್ಚು ಡೆನ್ಸಿಟಿ ಅಥವಾ ಸಾಂದ್ರತೆಯುಳ್ಳದಾಗಿತ್ತು, ಗುರುತ್ವ ಶಕ್ತಿಯೂ ಹೆಚ್ಚಾಗಿತ್ತು. ಆಗ ಒಂದೇ ಋತು, ಎಲ್ಲಾ ತಂಪು, ಭೂಮಿಯನ್ನು ಮಂಜಿನ ಹನಿಗಳು ಸದಾ ಆವರಿಸುತ್ತಿದ್ದವಂತೆ. ಮಳೆಯುಂಬುದೇ ಅಪರೂಪವಂತೆ. ಆದರೆ ಸದಾ ಹಚ್ಚ ಹಸಿರಿನ ಬೃಹತ್ ಮರಗಳು ನೂರಾರು ಅಡಿ ಬೆಳೆಯುತ್ತಿದ್ದುದೇ ಸಾಮಾನ್ಯವಂತೆ..ಅವುಗಳ ಜತೆ ಹಲವಾರು ನಾವು ಕೇಳರಿಯದ ಪ್ರಾಣಿ ಪಕ್ಷಿ ಸಂಕುಲವಿತ್ತಂತೆ. ಮನುಷ್ಯನ ಆಯುಸ್ಸು ಸಾವಿರ ವರ್ಷಕ್ಕೂ ಮಿಗಿಲಾಗಿರುವಂತಾ ಅತ್ಯಂತ ಆರೋಗ್ಯಕರ ವಾತಾವರಣ!! ಸ್ವಲ್ಪ ಕೂಡಾ ಮಾಲಿನ್ಯವೇ ಇಲ್ಲ...ಎಲ್ಲರೂ ಸಸ್ಯಾಹಾರಿಗಳು ಸಾಮಾನ್ಯವಾಗಿಯೇ ಅಹಿಂಸಾವಾದಿಗಳು ಅಂದರೆ...ಪ್ರಾಣಿಗಳನ್ನು ಕೊಲ್ಲುತ್ತಿರಲಿಲ್ಲ..ಅವೂ ಮಾನವನನ್ನು ಏನೂ ಮಾಡುತ್ತಿರಲಿಲ್ಲ... ಸಾಮಾನ್ಯವಾಗಿಯೇ ಅವರು ಜಯಂಟ್ಸ್ ಅಂದರೆ 20 ಅಡಿಗೂ ಎತ್ತರ ಇರುತ್ತಿದ್ದರು...ಒಂತರಾ ಈ ಲೋಕವೇ ಸೌಮ್ಯ, ಸಭ್ಯ ಅಹಿಂಸಾತ್ಮಕ ಕಾಲ.. ಇದನ್ನು ನಾವೀಗ ನಂಬಲಾಗದ್ದರಿಂದ ಸುಳ್ಳು ಪುರಾಣ ಅನ್ನುತ್ತೇವೇನೋ!

"ಲೆಮೂರಿಯದವರು ಆ ಕಾಲದಲ್ಲಿ ಹೇಗೆ ಅಷ್ಟು ಮುಂದುವರೆದರು? ಮತ್ತು ಯಾವುದರಲ್ಲಿ?" ಅರೆಕಣ್ಮುಚ್ಚಿ ಯೋಚನಾಗ್ರಸ್ತರಾಗಿ ಕೇಳಿದರು ಡಾ. ಪ್ರಮೋದ್ ದೇಸಾಯಿ.

ಇದು ಹಲವು ಬಾರಿ ಆಗಿತ್ತು. ಮತ್ತೆ ಪುನರಾವರ್ತನೆ ಅವಿನಾಶ್ ಪಾಲಿಗೆ. ನಿಟ್ಟುಸಿರಿಟ್ಟು ಮುಂದುವರೆಸಿದನು,

"ಇದು ಶಿಲಾಯುಗಕ್ಕೂ ಮುಂಚಿನ ನಾಡು ಎನ್ನುತ್ತಾರೆ. ಹಾಗಾಗಿ ನಾವು ಅವರನ್ನು ಆದಿಮಾನವರಿಗೆ ಹೋಲಿಸುವಂತಿಲ್ಲ...ಇವರು ಅದಕ್ಕೂ ಹಿಂದಿದ್ದ ಆಧುನಿಕ ಪೂರ್ಣ ಬೆಳವಣಿಗೆಯಾಗಿದ್ದ ದೇಶ-ಕಾಲದವರು.."

"ನಾವು ಆದಿಮಾನವನಿಗೂ ಮುನ್ನ ಭೂಮಿಯಲ್ಲಿ ಯಾರೂ ಇರಲೇ ಇಲ್ಲ ಎನ್ನುತ್ತೇವೆ" ಎಂದು ಸಮರ್ಥಿಸಿಕೊಂಡರು ಅವನ ಬಾಸ್.

ಅವಿನಾಶ್ ಮುಂದುವರೆಸಿದ:

"...ಈ ಮುಳುಗಿದ ಖಂಡ ಮತ್ತು ಮುಂದುವರೆದ ನಾಗರೀಕತೆಯ ಬಗ್ಗೆ ಮೊದಲು ಸಂಶೋಧನೆ ಮಾಡಿ ಬೇರೆ ಬೇರೆಯಾಗಿದ್ದ ಆಫ್ರಿಕಾ, ಮಾರಿಶಸ್ ಮುಂತಾದ ದೇಶಗಳ ಸಸ್ಯಗಳ ಮತ್ತು ಖನಿಜ ವಸ್ತುಗಳ ಸಾಮ್ಯತೆ ಕಂಡು ಬೆರಗಾದವನೇ ಫಿಲಿಪ್ ಸ್ಕ್ಲೇಟರ್ ಎಂಬ ವಿಜ್ಞಾನಿ. ಅವನೇ ಇವೆಲ್ಲಾ ಮೊದಲು ಒಂದೇ ಭೂಖಂಡವಾಗಿದ್ದುದು ಕಾಲಾನುಕಾಲದಲ್ಲಿ ಮುಳುಗಿ, ದೂರ ದೂರ ಛಿದ್ರವಾಗಿ ಬೆಳೆದಿರಬೇಕೆಂದು ಅನುಮಾನಪಟ್ಟ.

...ಲೆಮುರ್ ಎಂಬ ಜಾತಿಯ ಮಂಗಗಳು ನಂಬಲಾರದಷ್ಟು ದೂರ ದೂರದ ಏಷ್ಯಾ, ಆಸ್ಟ್ರೇಲಿಯಾ ಮತ್ತು ಆಫ್ರಿಕಾ ಪ್ರದೇಶಗಳಲ್ಲಿ ಸಿಕ್ಕುದರಿಂದ ಇವೆಲ್ಲ ಒಂದೊಮ್ಮೆ ಒಂದೇ ನಾಡಿನಲ್ಲಿ ಇದ್ದಿರಬಹುದು ಎಂದು ಅದನ್ನು ಲೆಮೂರಿಯಾ ಎಂದೇ ಕರೆದ.

...ಈಗಿನ ಮೂರೂ ಖಂಡಗಳ ನಡುವೆ ಹರಡಿಕೊಂಡಿದ್ದ ಆ ದೊಡ್ಡ ತ್ರಿಕೋನಾಕಾರದ ಖಂಡ ಪ್ರದೇಶವೇ ಅದು ಎಂದು ಅವನು ಸಾಧಿಸಿದ. ಅಂದರೆ ಈ ಮೂರೂ ಖಂಡಗಳು ಆಗ ಒಂದೇ ಲ್ಯಾಂಡ್ ಮಾಸ್ ಆಗಿತ್ತೆಂದು...”

...ಇದನ್ನು ಮುಂದುವರೆಸಿ ಆರ್ನೆಸ್ಟ್ ಹೆಕ್ಕೆಲ್ ಎಂಬ ಸಿದ್ಧಾಂತಿ ಅದನ್ನು ಮಾನವನ ಮೊದಲ ಸ್ವರ್ಗದಂತಾ ನಾಡು, ಮೊದಲ ನಾಗರೀಕ ವಸತಿ ಇದುವೇ ಎಂದು ವಾದಿಸಿದ.”

...ಆಗ ಅಲ್ಲಿಂದಲೂ ಮನುಕುಲವು ವಲಸೆ ಹೋಗಿ ನೆಲೆಸಿ ಬೇರೆ ಖಂಡಗಳಲ್ಲಿ ನೆಲೆಸಿತು ಎಂದೂ, ಆದರೆ ಮೂಲವಾದ ತುಂಬಾ ಸಂಪತ್ಭರಿತವಾದ ಶ್ರೀಮಂತ ನಾಡು ಮಾತ್ರ ಈ ಹಿಂದೂ ಮಹಾಸಾಗರದಲ್ಲಿ ಮುಳುಗಿಹೋಯಿತೆಂದು ಯುರೋಪಿನ ಬಹಳಷ್ಟು ಜನ ನಂಬಿದರು. ಇದಕ್ಕೆ ಖಂಡಗಳ ಬೇರ್ಪಡೆ ಎನ್ನುವ ಸಿದ್ಧಾಂತವೂ ಬೆಂಬಲಿಸಿತು”

ಡಾ. ಪ್ರಮೋದ್ ದೇಸಾಯಿ ಆಗ ಏನೋ ಯೋಚಿಸುತ್ತಿದ್ದವರು, “ಹಾಗಾದರೆ ಅದಕ್ಕೂ ಮುಂಚೆ ಈ ಕಡಲು ಪುರಾಣಗಳಲ್ಲಿ ನಂಬಿಕೆಯಿದ್ದ ಯುರೋಪಿಯನ್ ನಾವಿಕರು ಬಂಗಾರ ಭೇಟೆಗೂ ಇದಕ್ಕೂ ಸಂಬಂಧ ಕಲ್ಪಿಸುತ್ತಾರಲ್ಲ , ಅದು ಹೇಗೆ?”

ಅವಿನಾಶನಿಗೂ ಅವರ ಮಾತು ಅಚ್ಚರಿ ತಂದಿತು! ಈ ರಹಸ್ಯವನ್ನು ತಾನೆಂದೂ ಮುಂಚೆ ಅವರಿಗೆ ಹೇಳಿರಲಿಲ್ಲ.

“ಹೌದು, ಮೊದಲು ಬಂಗಾರದ ಅನ್ವೇಷಣೆಯಲ್ಲಿ ಗೋಲ್ಡ್ ರಶ್ ಎಂದು ಹೊರಟವರೇ ಹಡಗುಗಳಲ್ಲಿ ಖಂಡ ಪರ್ಯಟನೆ ಮಾಡುತ್ತಿದ್ದ ಸ್ಪಾನಿಶರು... ಬ್ರಿಟಿಷರು, ಪೋರ್ಚುಗೀಸರಿಗಿಂತಾ ಮುನ್ನ... ಇಸವಿ 1500-1600 ರಲ್ಲೇ”

“ಬಂಗಾರದ ಬಗ್ಗೆ ಹೇಳು...” ಡಾ. ದೇಸಾಯರ ಈ ಮಾತು ಕೇಳಿ ಅಚ್ಚರಿಯಾದರೂ ಅವಿನಾಶ್ ತಡೆದುಕೊಂಡ.

“ ಲೆಮೂರಿಯಾ ಕಾಲದಲ್ಲಿ ಭೂಮಿ ಅತ್ಯಂತ ಸಮೃದ್ಧವಾಗಿತ್ತೆಂದು ಆಗಲೇ ಹೇಳಿದೆ. ಖನಿಜ ಸಂಪತ್ತು, ಅಮೂಲ್ಯ ರತ್ನಗಳೂ, ಅದರಲ್ಲೂ ಚಿನ್ನ ಧಾರಾಳವಾಗಿ ಸಿಗುತ್ತಿತ್ತು...ಆಗಿನವರು ಚಿನ್ನದ ಅತ್ಯಮೂಲ್ಯ ಗುಣಗಳನ್ನು ಬಲ್ಲವರಾಗಿದ್ದರು. ತಮ್ಮ ಸಿಂಗಾರವಲ್ಲದೇ, ಕಟ್ಟಡದಲ್ಲಿಯೂ ನಿರ್ಮಲವಾದ ಪರಿಶುದ್ಧ ಬಂಗಾರದ ಪ್ರತಿಫಲನ, ಅದರ ಆರೋಗ್ಯಕರ, ವೈಜ್ಞಾನಿಕ, ವೈದ್ಯಕೀಯ ಲಾಭಗಳನ್ನೂ ಚೆನ್ನಾಗಿ ಅರಿತು ಬಳಸುತ್ತಿದ್ದುದರಿಂದ ಸಾರ್ವಜನಿಕ ಸ್ಥಳಗಳು ಎಲ್ಲೆಲ್ಲೂ ನಿಗಿ ನಿಗಿ ಎಂದು ಬಂಗಾರದಲ್ಲಿ ಕಣ್ಣು ಕೋರೈಸುವಷ್ಟು ಹೇರಳವಾಗಿ ಕಾಣುತ್ತಿತ್ತಂತೆ”

“ಗೋಲ್ಡನ್ ಕಾಂಟಿನೆಂಟ್!” ಉದ್ಗರಿಸಿದರು ತಮ್ಮ ಪೆನ್ನನ್ನು ಟೇಬಲ್ ಮೇಲೆ ತಿರುಗಿಸುತ್ತಾ ಡಾ.ದೇಸಾಯಿ.

“ಆದರೆ ಅವರು ಇದನ್ನು ಮಾನವ ಕಲ್ಯಾಣಕ್ಕಾಗಿ ಆಧ್ಯಾತ್ಮಿಕ ಸಾಧನೆಗೆ ಹೆಚ್ಚು ಒತ್ತು ಕೊಟ್ಟವರು, ನಿಸ್ವಾರ್ಥರಾಗಿ ಬಾಳಿದರಂತೆ. ಇವರಿಂದ ಈ ದೈವೀಕ ಗುಣಗಳನ್ನು ಕಲಿಯಲೆಂದು ಪಕ್ಕದ ಅಟ್ಲಾಂಟಿಸ್ ಎಂಬ ಖಂಡದವರೂ ಬರುತ್ತಿದ್ದರಂತೆ. ಅಲ್ಲದೇ ಹಾರುವ ತಟ್ಟೆಗಳಲ್ಲಿ ಅನ್ಯಗ್ರಹದ ಜೀವಿಗಳು ಇವರ ಜೀವನಶೈಲಿ ಮತ್ತು ವಿಜ್ಞಾನದ ಸದುಪಯೋಗ ಕಾಣಲು ಆಗಾಗ ಬರುವರಂತೆ..ಎಲ್ಲರನ್ನೂ ಲೆಮೂರಿಯನ್ನರು ಬರಮಾಡಿಕೊಂಡು ಸಜ್ಜನರಾಗಿ ಬಾಳಿದರಂತೆ...”

“ಬಂಗಾರ?” ಮತ್ತೆ ಒತ್ತಿ ಕೇಳಿದರು ಡಾ. ದೇಸಾಯಿ

“ಸರ್. ಹೇಳುವೆ ಕೇಳಿ.. ಲೇಮೂರಿಯನ್ನರು ತಮ್ಮ ನಗರಗಳ ಸುತ್ತಲೂ ಕಟ್ಟಿದ ಬಂಗಾರದ ಕೋಟೆಗಳಲ್ಲದೇ, ಅದರಲ್ಲೇ ಕಟ್ಟಿದ ಹಲವು ಸಾಲಿಡ್ ಪಿರಮಿಡ್ಡುಗಳೇ ಇದ್ದವೆನ್ನುತ್ತಾರೆ. ಇವೆಲ್ಲಾ ಎನರ್ಜಿ ಗ್ರಿಡ್ ಎಂದು ಅತ್ಯಂತ ಪ್ರಬಲ ಶಕ್ತಿಕೋಟೆ ಮತ್ತು ಸಂಚಾರ ಸಾಧನವಾಗಿತ್ತಂತೆ...ಆ ಚಿನ್ನವೆಲ್ಲಾ ಉತ್ತಮ ಕಿರಣಗಳನ್ನು ಅಂತರಿಕ್ಷದಿಂದ ದಾರಿ ದೀಪಗಳಂತೆ ದಿಕ್ಸೂಚಿಗಳಾಗಿದ್ದವಂತೆ...”

... ಆದರೆ ಕಲಿಯುಗ ಬಂದ ಮೇಲೆ ಎಲ್ಲಾ ಆದರ್ಶ, ನೀತಿಗಳನ್ನೂ ಗಾಳಿಗೆ ತೂರಿಬಿಟ್ಟ ಮಾನವ. ಕ್ರಿ ಶ 1500-1600 ರ ಸ್ಪ್ಯಾನೀಶ್ ನಾವಿಕರಿಗೆ ಚಿನ್ನದಾಹವನ್ನು ಹೆಚ್ಚಿಸಲು ಈ ಕತೆಗಳು ಇನ್ನೂ ಪ್ರೋತ್ಸಾಹಿಸಿದವು ಅಷ್ಟೇ...ಅವರು ಎಲ್ಲೆಲ್ಲೂ ಈ ಪುರಾತನ ಚಿನ್ನದ ಬಗ್ಗೆ ತಿಳಿದ, ಮುಳುಗದೇ ಉಳಿದಿದ್ದ ನಿಧಿ ಭೇಟೆಗಾಗಿ ಹುಚ್ಚರಂತೆ ಅಲೆದು ತಾವು ಕಾಲಿಟ್ಟ ಹೊಸ ಪ್ರದೇಶದ ಜನರನ್ನು ಹಿಂಸಿಸತೊಡಗಿದರು...”

“ದಕ್ಷಿಣ ಅಮೇರಿಕಾವನ್ನು ವ್ಯಾಪಕವಾಗಿ ಲೂಟಿ ಮಾಡಿ ಸುಟ್ಟರು...ಅದು ಸರಿ, ಹಾಗಾದರೆ ಈ ದ್ರಾವಿಡ ನಾಡು ಕುಮರಿಖಂಡಂ ಎಂಬುದು?” ಎಂದು ನೆನೆಪಿಸಿ ಕೇಳಿದರು ಡಾ. ದೇಸಾಯಿ. ತನಗೆ ತಿಳಿದಿದ್ದನ್ನೆಲ್ಲಾ ತಿಳಿಸದೇ ಅವರು ಬಾಯಿಬಿಡರು ಎಂಬುದು ಅವಿನಾಶನಿಗೆ ಮನದಟ್ಟಾಯಿತು.

“ಅದು ನಂತರದ ಪೌರಾಣಿಕ ಕತೆಯಾಗಿರಬೇಕು. ಆದರೆ ತಮಿಳಿನ ಬಹಳ ಹಳೇ ಗ್ರಂಥ ಕಾವ್ಯಗಳಲ್ಲಿ ತುಂಬಾ ಜನಪ್ರಿಯವಾದ ಕಂದ ಪುರಾಣಮ್ ಮತ್ತು ಸೂರ್ಯನಾರಾಯಣ ಶಾಸ್ತ್ರಿಗಳ ಕೃತಿಗಳಲ್ಲಿ ದ್ರಾವಿಡ ಹಿರಿಮೆಯನ್ನು ಸಾರಿದ ಕುಮರಿಕಂಡಂ ಅಥವಾ ತಮಿಳಿಗಂ ಎಂಬ ಬಹಳ ಸುಂದರ ಸ್ವರ್ಗದಂತಾ ನಾಡೊಂದು ಈಗಿನ ತಮಿಳ್ನಾಡಿಗಿಂತಾ ಕೆಳಗೆ ಭೂಪಟದಲ್ಲಿತ್ತು ಎಂದು ವರ್ಣಿಸಿದ್ದಾರೆ. ಅದುವೇ ಈಗಿನ ತಮಿಳಿನ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಯ ಪ್ರತೀಕವೆಂದೂ, ಮುನಿ ಅಗಸ್ತ್ಯರು ಸೃಷ್ಟಿಸಿದ ನಾಡು ಅದಾಗಿತ್ತೆಂದೂ ಬರೆದಿದ್ದಾರೆ. ಅಲ್ಲಿಯೇ ತೇನ್ ಮಧುರೈ ಎಂಬ ಬೃಹತ್ ಸುವರ್ಣ ನಗರವಿತ್ತೆಂದೂ ಪಾಂಡ್ಯರ ವಂಶಸ್ತರು ಅಲ್ಲೇ ಹುಟ್ಟಿದರು ಎನ್ನುತ್ತಾರೆ. ಈ ತೇನ್ ಮಧುರೈ ಬಂಗಾರದ ಅರಮನೆ ಮತ್ತು ಕೋಟೆಗಳಿಂದ ವೈಭವದಿಂದ ಕೂಡಿತ್ತಂತೆ...ಈ ಕುಮರಿಕಂಡಂ ನಾಡು ಪ್ರವಾಹದಲ್ಲಿ ಸಾಗರದ ಗರ್ಭ ಸೇರಿ ನಾಶವಾದ ಮೇಲೆ ಉಳಿದವರು ವಲಸೆ ಬಂದು ಸುರಕ್ಷಿತವಾಗಿದ್ದ ಈಗಿನ ತಮಿಳ್ನಾಡಿನಲ್ಲಿ ಆ ಹಳೇ ನಗರಗಳ ಚಿಕ್ಕ ಮಾದರಿಯಾಗಿ ಈಗಿನ ಮಧುರೈ ಮುಂತಾದ ಊರುಗಳನ್ನು ಕಟ್ಟಿ ಇಲ್ಲೇ ರಾಜ್ಯ ಸ್ಥಾಪಿಸಿದರೆನ್ನುತ್ತಾರೆ... ಅದು ನಮಗೆ ತಿಳಿದ ಇತಿಹಾಸ!”

ಡಾ.ದೇಸಾಯಿ ಈ ಕತೆ ಕೇಳಿ ಸ್ವಲ್ಪ ಮುಗುಳ್ನಕ್ಕು “ಚಿನ್ನ, ಸುವರ್ಣ, ಬಂಗಾರ!!. ಇಲ್ಲಿಯೂ ಅದರ ವರ್ಣನೆ ಮಾತ್ರ ಇದ್ದೇ ಇದೆ. ಲೆಮೂರಿಯಾ ಆಗಲಿ, ಕುಮರಿಕಂಡಂ ಅನ್ನಲಿ ಅದಿತ್ತೇನೋ?... ಅದರ ನೆನಪಿನಲ್ಲಿಯೇ ಕಟ್ಟಿದರಂತೆ ಕನ್ಯಾಕುಮಾರಿ ಊರು ಎಂದೂ ಒಂದು ಕಡೆ ಓದಿದೆ...ಒಟ್ಟಾರೆ ಆಗಿನ ಜಾನಪದದ ವಿಸ್ತೃತ ವರ್ಣನೆಯಲ್ಲಿರುವುದು ನಿಜ!...ಆಶ್ಚರ್ಯಕರವಾಗಿ ಪಾಶ್ಚಿಮಾತ್ಯರೂ, ನಮ್ಮವರೂ ನಂಬುವ ಏಕಮಾತ್ರ ನಿದರ್ಶನ ಇದಿರಬಹುದು.” ತಾವು ನಂಬುತ್ತಾರೆಯೋ ಇಲ್ಲವೋ ಹೇಳಲಿಲ್ಲ. ಚಾಲಾಕಿ ಬಾಸ್!

ಅವಿನಾಶ್ ತಾನು ಹೇಳಿದ್ದು ಸಾಕೆನಿಸಿ ಸುಮ್ಮನಾದ ಇನ್ನು ಅವರೇ ಹೇಳಲಿ ಎಂಬಂತೆ.

“ಹಾಗಾದರೆ ಇವತ್ತಿನ ನಮ್ಮ ಭೇಟಿಯ ಅರ್ಥ ಕತೆ ನಿನಗೆ ಗೊತ್ತಿದೆಯೆಂದಾಯಿತು…” ಎಂದು ತಮ್ಮ ಕಂಪ್ಯೂಟರ್ ಪರದೆಯನ್ನು ಅವನು ಓದುವಂತೆ ಅತ್ತ ತಿರುಗಿಸಿದರು ಡಾ. ದೇಸಾಯಿ.

“ಏನದು?” ಎನ್ನುತ್ತಾ ಆಸಕ್ತಿಯಿಂದ ಓದಿದ ಅವಿನಾಶ್.

ಅದರ ಸಾರಾಂಶವೆಂದರೆ,

ಕಳೆದ ತಿಂಗಳು ಭಾರತದ ಸಾಗರ ಭೂವಿಜ್ಞಾನಿಗಳು ಯಾವುದೋ ರಹಸ್ಯ ಮಿಶನ್ನಿಗಾಗಿ ಹಿಂದೂ ಮಹಾಸಾಗರದಲ್ಲಿ ನೇವಿ ಸಬ್-ಮೇರೀನ್ ಬಳಸಿ ಇತ್ತೀಚೆಗೆ ಪಯಣಿಸುತ್ತಿದ್ದಾಗ ಕೆಲ ತಿಂಗಳ ಹಿಂದೆ ಸಾಗರಗರ್ಭದಲ್ಲಿ ಉಂಟಾದ ಭೂಕಂಪದಿಂದ ಎದ್ದುಬಂದ ಮುಳುಗಿದ್ದ ಹಳೇ ಎರಡು ಹಡಗುಗಳ ಅವಶೇಷಗಳು ಸಿಕ್ಕಿವೆ. ಅವರು ಮುಂದೆ ತನಿಖೆ ಮಾಡಲಾಗಿ ಅವು 1600 ಇಸವಿಯ ಕಾಲದ ಸ್ಪೇನ್ ದೇಶದ ಹಡಗುಗಳೆಂದೂ, ಅದರ ಹೆಸರುಗಳು ಸ್ಯಾಂಟಿಯಾಗೋ ಮತ್ತು ಸ್ಯಾನ್ ಬೆತ್ ಎಂದೂ ತಿಳಿದು ಬಂದು ಸ್ಪೇನಿಗೆ ಸರಕಾರದ ಮೂಲಕ ಸುದ್ದಿ ಮುಟ್ಟಿಸಿದ್ದಾರೆ.

ಸ್ಪೇನಿನವರು ತಮ್ಮ ದಾಖಲೆಗಳನ್ನು ಪರಿಶೀಲಿಸಿ ಅವು ತಮ್ಮ ದೇಶದ ಆ ಕಾಲದಲ್ಲಿ ಮುಳುಗಿ ಹೋದ ಹಡಗುಗಳೆಂದೂ, ಅದರ ಕ್ಯಾಪ್ಟನ್ಸ್ ಹೆಸರು ಸಾಂಚೆಜ್ ಮತ್ತು ಡೈಗೋ ಎಂದೂ, ಅವರು ಆ ದ್ವೀಪಗಳಲ್ಲಿ ಚಿನ್ನದ ನಿಧಿ ಭೇಟೆ ಮಾಡುತ್ತಿದ್ದರೆಂದೂ, ಆಮೇಲೆ ಯಾವುದೇ ಅಪ್ಡೇಟ್ ಇಲ್ಲದೇ ಸಮುದ್ರದಲ್ಲೇ ಕಳೆದುಹೋದರೆಂದೂ ದಾಖಲೆಯಿದೆ ಎಂಬ ಇ ಮೇಲ್ ವರದಿಯನ್ನು ಓದಿದನು ಅವಿನಾಶ್.

“ಈಗ ಅವನ್ನು ಕಂಡು ಹಿಡಿದಿರುವುದರಿಂದ ಅದರಲ್ಲಿದ್ದ ಸಂಪತ್ತನ್ನು ಕಾಪಾಡಿ ತೆಗೆಯಬಹುದಾದರೆ ಸಹಕರಿಸಿ ಎಂದು ಸ್ಪೇನ್ ದೇಶದವರು ಭಾರತವನ್ನು ಕೋರಿದ್ದಾರೆ…”ಎಂದು ಕೊನೆಯ ಸಾಲನ್ನು ಒತ್ತಿಹೇಳಿದರು ಡಾ. ದೇಸಾಯಿ.

“ಟ್ರೆಶರ್ ಹಂಟ್ ಮತ್ತು ರೆಸ್ಕ್ಯೂ(ನಿಧಿ ಭೇಟೆ ಮತ್ತು ಕಾಪಾಡುವಿಕೆ)…” ಚಿಕ್ಕ ಸಿಳ್ಳೆ ಹಾಕಿದನು ಉತ್ಸಾಹದಿಂದ ಅವಿನಾಶ್. “ಇಲ್ಲಿ ನನಗೆ ಬೋರಾಗುತ್ತಿತ್ತು, ಸದ್ಯಾ…”ಎನ್ನುತ್ತಿರುವಾಗ ಅವನ ಮಾತನ್ನು ಕತ್ತರಿಸಿ ಹೇಳಿದರು ಡಾ. ದೇಸಾಯಿ,

“ಆದರೆ ಬಂಗಾರದ ಹಿಂದೆ ಒಂದು ಶತ್ರು ಪಡೆಯ ದುಷ್ಟರೂ ಬಿದ್ದಿದ್ದಾರೆ, ಹಾಗಾಗಿ ಅವರಿಗಿಂತಾ ಮುಂಚೆ ನಾವು ಅದನ್ನು ವಶಪಡಿಸಿಕೊಳ್ಳಬೇಕು…”

“ನಮ್ಮ ಎರಡು ದೇಶದ ಸರಕಾರದ ನಡುವಿನ ಈ ರಹಸ್ಯ ಒಪ್ಪಂದದಲ್ಲಿ ಶತ್ರು ಪಡೆ ಯಾವುದು? ಅವರಿಗೆ ಹೇಗೆ ಮಾಹಿತಿ ತಿಳಿಯಿತು?” ಅವಿನಾಶ್ ಕಣ್ಣಗಲಿಸಿದ.

’ಇದು ನಿನಗೆ ಅರ್ಥವಾಗದೇ?’ ಎಂಬಂತೆ ಮಾರ್ಮಿಕವಾಗಿ ನಕ್ಕು ಭುಜ ಕುಣಿಸಿದರು ಡಾ. ದೇಸಾಯಿ.

“ಅಂದರೆ ಆಗಲೇ ಮಾಹಿತಿ ಸೋರಿಕೆಯಾಗಿದೆ…ಅವರ ಗುಪ್ತಚರರು ಸರಕಾರದಲ್ಲಿಯೂ ಇದ್ದಾರೆ , ಅಲ್ಲವೆ ಸರ್?”

ಡಾ. ದೇಸಾಯಿ ಇದೆಲ್ಲಾ ನಮ್ಮ ಕೆಲಸದಲ್ಲಿ ಮಾಮೂಲೆಂಬಂತೆ ತಲೆಯಾಡಿಸಿದರು,

“ನಮ್ಮ ಸರಕಾರದಲ್ಲೋ, ಅವರದರಲ್ಲೋ ಎಲ್ಲೋ...ದುರಾಸೆಯ ಜನ ಬೇಹುಗಾರಿಕೆ ಮಾಡಿ ಈ ಕಾಲದ ಪೈರೇಟ್ಸ್ (ಕಡಲುಗಳ್ಳ ಮಾಫಿಯಾ) ಗಳನ್ನು ಈ ಹಡಗಿನ ಚಿನ್ನದ ಹಿಂದೆ ಛೂ ಬಿಟ್ಟಿದ್ದಾರೆ. ಮುಖ್ಯವಾಗಿ ಸ್ಪ್ಯಾನಿಶ್ ಮೂಲದ...”

ಎನ್ನುತ್ತಿರುವಾಗ ಈ ಬಾರಿ ಅಡ್ಡಮಾತಾಡಿದ ಅವಿನಾಶ್,

“ರಾಮಿರೆಜ್ ಮತ್ತು ಸೋಮಾಲಿಯದ ದುಷ್ಟ ಪಡೆ. ಇತ್ತೀಚೆಗೆ ಲಂಡನ್ನಿನಿಂದ ತಪ್ಪಿಸಿಕೊಂಡು ಹಿಂದೂ ಮಹಾಸಾಗರದಲ್ಲಿ ಈಗ ಕಾರ್ಯಗತನಾಗಿರುವವನು..”

ಅವನ ನಿರ್ದಿಷ್ಟ ನುಡಿಗಳನ್ನು ಮೆಚ್ಚಿ ನುಡಿದರು ಡಾ. ದೇಸಾಯಿ ”ಹೌದು. ಅಂದರೆ ನೀನು ಕಡಲು ಬಿಟ್ಟು ನೆಲಕ್ಕೆ ಬಂದರೂ ನಿನ್ನ ಪತ್ತೇದಾರಿ ಮೂಲಗಳ ಜತೆ ಸಂಪರ್ಕದಲ್ಲಿದ್ದೀಯೆ, ಎಲ್ಲಾ ತಿಳಿದುಕೊಡಿದ್ದೀಯೆ ಎಂದಾಯಿತು.”

“ಅದು ನನ್ನ ಕೆಲಸ, ಸಂಬಳ ತೆಗೆದುಕೊಳ್ಳುತ್ತೇನೆ...” ಎಂದು ಸಂಕೋಚದಿಂದ ನಕ್ಕ ಅವಿನಾಶ್. ರಾತ್ರಿ ಹೊತ್ತು ಬಂದರುಗಳಲ್ಲಿ ಗಸ್ತು ತಿರುಗಿ, ಅಲ್ಲಿನ ಚಿಕ್ಕ ಪುಟ್ಟ ಬಾರುಗಳಲ್ಲಿ ಕುಡಿಯಲು ಬಂದ ನಾವಿಕರ ಮಾತುಗಳನ್ನು ಆಲಿಸಿ ಸುದ್ದಿ ಸಂಗ್ರಹಿಸುವುದೂ ತನ್ನ ಕರ್ತವ್ಯ ಎಂದುಕೊಂಡಿದ್ದ ಅವಿನಾಶ್. ಫ್ಲೇವಿಯೋ ರಾಮಿರೆಜ್ ಎಂಬ ಕುಖ್ಯಾತ ಕಡಲ್ಗಳ್ಳನನ್ನು ಬಹಳ ಕಷ್ಟಪಟ್ಟು ಬ್ರಿಟಿಷ್ ನೇವಿ ಮೂರು ತಿಂಗಳ ಕೆಳಗೆ ಬಂಧಿಸಿದ್ದರೂ ಯಾರದೋ ಒಳಗಿನವರ ಸಹಾಯದಿಂದ ಮತ್ತೆ ಕಣ್ತಪ್ಪಿಸಿಕೊಂಡು ತನ್ನ ವೃತ್ತಿಗೆ ಮರಳಿದ್ದ. ಅದನ್ನು ನಾವಿಕರು ಕುಡಿದ ಅಮಲಿನಲ್ಲಿ ಮಸಾಲೆ ಹಚ್ಚಿ ಹೇಳಿದ್ದೇ ಹೇಳಿದ್ದು!

“ಇದು ನಿನಗೆ ತಕ್ಕ ಮಿಷನ್ ಎಂದು ನಾನು ಭಾವಿಸುತ್ತೇನೆ. ನಮ್ಮ ನೇವಿಯ ಸಬ್ ಮೆರೀನ್ ಡಿವಿಶನ್ನಿನ ಸಿಬ್ಬಂದಿಯನ್ನು ನಿನ್ನ ಟೀಮಿಗೆ ಬಳಸಿಕೊಳ್ಳಲು ನಿನಗೆ ಪೂರ್ಣ ಸ್ವಾತಂತ್ರ್ಯ ಇದೆ. ಮಾಡುವೆ ತಾನೆ?” ಎಂದು ವಿಶ್ವಾಸದಿಂದ ಕೇಳಿದರು ಡಾ. ದೇಸಾಯಿ.

“ಹೊರಟೆ ಎಂದುಕೊಳ್ಳಿ..ನನ್ನ ಫೈನಲ್ ಬ್ರೀಫಿಂಗ್ ಯಾವಾಗ, ಯಾರಿಂದ?” ಎನ್ನುತ್ತಾ ಲೆಮೂರಿಯಾ ಬಗ್ಗೆ ಒಂದು ತಿಂಗಳ ಮುಂಚೆ ತಾನೇ ಅವರಿಗಿತ್ತಿದ್ದ ಫೈಲನ್ನು ಕೈಗೆತ್ತಿಕೊಂಡ. ಸ್ವಲ್ಪವಾದರೂ ಹೊಸ ವಿವರಗಳು ಅದರಲ್ಲಿ ನೇವಿಯ ಗುಪ್ತಚರ ವಿಭಾಗ ಸೇರಿಸಿದ್ದರೇನೋ!

“ನಾಳೆ ಬೆಳಿಗ್ಗೆ 8 ಗಂಟೆಗೆ ಇಲ್ಲಿಗೇ ಬಾ”

3

2017 ಇಸವಿ, ಮರುದಿನ...

ವೈಸ್ ಅಡ್ಮಿರಲ್ ಕುಲಕರ್ಣಿಯವರ ಕ್ಯಾಬಿನ್ನಿನಿಂದ ಆಪರೇಶನ್ ಗೋಲ್ಡನ್ ಶಿಪ್ ಎಂದು ಹೆಸರಿಟ್ಟ ಈ ಹೊಸ ಯೋಜನೆಯ ಬ್ರೀಫಿಂಗ್ ಮುಗಿಸಿಕೊಂಡು ಹೊರಬಂದು ನೇರವಾಗಿ ಕ್ಯಾಬಿನ್ನಿಗೆ ಬಂದು ತನ್ನ್ ಸದಾ ರೆಡಿ ಇರುತಿದ್ದ ಖಾಸಗಿ ಟ್ರಾವೆಲ್ ಕೇಸ್ ಪರೀಕ್ಷಿಸಿಕೊಂಡ.

ಊರಿನಲ್ಲಿದ್ದ ತನ್ನ ಅಮ್ಮನಿಗೆ ಕರೆ ಮಾಡಿದ.

“ಸ್ವಲ್ಪ ದಿನ ಅಮ್ಮ, ಅಂತರ ರಾಷ್ಟ್ರೀಯ ಜಾಲದವರ ಹಿಂದೆ ಮತ್ತೆ ಸಬ್ ಮೆರೀನ್ ನವರ ಜತೆ ಹೋಗುತ್ತಿದ್ದೇನೆ. ಶ್ರೀಲಂಕಾದಿಂದ ದಕ್ಷಿಣಕ್ಕೆ..ನನ್ನ ಜತೆ ಸೈನಿಕರೂ ಇರುತ್ತಾರೆ, ನೀನೇನೂ ಕಳವಳ ಪಡಬೇಡ..”

“ಮಂಜುನಾಥ ಸ್ವಾಮಿಗೆ ಪೂಜೆ ಮಾಡಿಸುತ್ತಿರುತ್ತೇನೆ...ಹೋಗಿ ಬಾಪ್ಪ....”ಎಂದರು ಮಗನ ವೃತ್ತಿ ಚೆನ್ನಾಗಿ ಅರಿತಿದ್ದ ತಾಯಿ.

ಅಡ್ಮಿರಲ್ ಅಂದು ಹೇಳಿದ್ದು ಸ್ವಲ್ಪ ಕಳವಳಕಾರಿಯೇ ಆದರೂ ಹೊಸದೇನಲ್ಲ ಅವಿನಾಶ್ ಪಾಲಿಗೆ.

ಆಗಲೇ ಸಮುದ್ರದಡಿಯಲ್ಲಿ ಹೋರಾಟ ಆರಂಭವಾಗಿತ್ತಂತೆ. ಚಿಕ್ಕ ಸಬ್ ಮೇರೀನಿನಲ್ಲಿ ಹೊರಟ ಇಂಡಿಯನ್ ನೇವಿ ಸಿಬ್ಬಂದಿಯ ಮೇಲೆ ಆಗಲೇ ಮುನ್ನಡೆ ಸಾಧಿಸಿದ್ದ ರಾಮಿರೆಜ್ಜನ ಹಡಗಿನಿಂದ ಇಳಿದ ಸಶಸ್ತ್ರ ಸಬ್ ಮೇರೀನೊಂದು ಗುಂಡಿನ ದಾಳಿ ನೆಡೆಸಿತ್ತಂತೆ. ಈಗ ನೇವಿ ಸಬ್ ಮೆರೀನ್ ಸಿಗ್ನಲ್ ವೀಕ್ ಆಗಿ ಏನೋ ತೊಂದರೆಯಲ್ಲಿದೆ ಎಂದೂ ಇಲ್ಲಿನ ಅಧಿಕಾರಿವರ್ಗ ಭಾವಿಸಿದೆಯಂತೆ.

ಮೊದಲು ಅವರನ್ನು ಸುರಕ್ಷತೆಗೆ ಒಯ್ದು ಅನಂತರ ತಾನು ರಾಮಿರೆಜ್ ಕಡಲ್ಗಳ್ಳರ ತಂಡದ ಮೇಲೆ ಪ್ರಹಾರ ಮಾಡಬೇಕು.

ಅಂದು ರಾತ್ರಿಯ ಕತ್ತಲಲ್ಲಿ ಬಂದರಿನಿಂದ ತಾನು ಸಾಗರದಡಿಗೆ ಹೊರಡುವುದ್ದಿದುದರಿಂದ ಅದುವರೆಗಿನ ಸಮಯದಲ್ಲಿ ನಕ್ಷೆಗಳು ಸಮುದ್ರದ ಅಕ್ಷಾಂಶ ರೇಖಾಂಶಗಳು ಮತ್ತು ಲೆಮೂರಿಯಾದ ಕಳೆದುಹೋದ ನಿಧಿಗೆ ಹೋದವರ ಹಳೇ ಕತೆಗಳನ್ನು ಮತ್ತೆ ಅಧ್ಯಯನ ಮಾಡಿ , ಸಮುದ್ರದಡಿಯಲ್ಲಿಯೂ ಕಾರ್ಯ ಮಾಡಬಲ್ಲ ತನ್ನ ವಿಶೇಷ ಟ್ಯಾಬ್ಲೆಟ್ ಪಿಸಿನಲ್ಲಿ ಅವನ್ನು ಅವಿನಾಶ್ ಸೇವ್ ಮಾಡಿ ದಾಖಲಿಸಿಕೊಂಡ.

ಸಂಜೆ ಆರಕ್ಕೆ ತನ್ನ ಟೀಮಿನ ಜತೆ ಯೋಜನೆಗಾಗಿ ಮೀಟಿಂಗ್ ಏರ್ಪಡಿಸಿದ.

ಸಬ್ಮೆರೀನ್ ಸ್ಕ್ವಾಡ್ರನ್ ಲೀಡರ್ ಜಿತೇಂದ್ರ ಜಾಗೀರ್ದಾರ್ ಮತ್ತು ಅನುಪಮ್ ಖನ್ನಾ ಅವರಲ್ಲಿ ಮುಖ್ಯವಾದವರು ಎಂದು ನೇಮಿಸಿದ.

“ನಮ್ಮ ಬಳಿ ಅಂಡರ್ ವಾಟರ್ ಫ್ಲೇರ್ಸ್, ಮದ್ದು ಗುಂಡು, ಟಾರ್ಪೆಡೋ ಗಳಿವೆ...ಆದರೆ ಚಿಕ್ಕ ಪ್ರಮಾಣದಲ್ಲಿವೆ ಸರ್.” ಜಿತೇಂದ್ರ ವರದಿ ಮಾಡಿದ.

ಅವಿನಾಶ್ ಮುಗುಳ್ನಕ್ಕನು, “ಚಿಕ್ಕ ಯುದ್ಧಕ್ಕಿಂತಾ ಹೆಚ್ಚಿನದೇನೂ ಆಗಲಾರದು ಎಂದು ನಂಬೋಣ...ರಾಮಿರೆಜ್ ಹತನಾಗದಿದ್ದರೆ, ಬಂಧಿಸಬೇಕು... ಅವರೇನಾದರೂ ಚಿನ್ನ ಆಗಲೇ ಪಡೆದಿದ್ದರೆ ಅದನ್ನು ವಶ ಮಾಡಿಕೊಳ್ಳಬೇಕು”

“ನಮ್ಮ ಅಘಾತಕ್ಕೊಳಗಾದ ಸಬ್ ಮೆರೀನ್ ಐ ಎನ್ ಎಸ್ ಜಲಮಿತ್ರ - ಅವರು ಆಗಲೇ ಜಲಾಂತರ್ಗಾಮಿ ರಕ್ಷಕ ಉಪಕರಣಗಳನ್ನೊಳಗೊಂಡ ಚಿಕ್ಕ ಜುಗಾಡ್ ( ವ್ಯವಸ್ಥೆ) ಮಾಡಿದ್ದರೆಂದು ತನ್ನ ಕೊನೆ ರಿಪೋರ್ಟಿನಲ್ಲಿ ತಿಳಿಸಿದೆ. ಅಂದರೆ ಬಂಗಾರವನ್ನು ತೆಗೆಯಲು ಅವರು ಆರಂಭಿಸಿರಬಹುದು...”ಎಂದನು ಅನುಪಮ್.

ಅವಿನಾಶ್ ಗಡಿಯಾರ ನೋಡಿಕೊಂಡನು, “ಹಾಗಾದರೆ ನಮ್ಮ ಬಳಿ ಹೆಚ್ಚು ಸಮಯ ಮಿಕ್ಕಿಲ್ಲ. ಆದಷ್ಟು ಬೇಗ ನಮ್ಮ ಸಬ್-ಮೆರೀನ್ 'ಐ ಎನ್ ಎಸ್ ಸಮುದ್ರಸಖ' ನನ್ನು ತಯಾರು ಮಾಡಿ, ಎಲ್ಲಾ ಲೋಡ್ ಮಾಡಿ...ಒಟ್ಟು ನಾಲ್ಕು ಐದು ಜನ ಇರುತ್ತೇವೆ ಅಲ್ಲವೆ?”

“ನೀವೂ ಸೇರಿ ಆರು, ಸರ್” ಜಿತೇಂದ್ರ ಹೆಡ್ ಕೌಂಟ್ ಕೊಟ್ಟನು.

4

ಐ ಎನ್ ಎಸ್ ಸಮುದ್ರಸಖ ಸಬ್ಮೆರೀನ್ ನೌಕೆ ಕೊಚ್ಚಿ ನೆವಲ್ ಬೇಸಿನಿಂದ ರಾತ್ರಿ 8 ಕ್ಕೆ ನೀರಿಗಿಳಿಯಿತು.

ಅಂದಿನ ಮೆರೀನ್ ಹವಾಮಾನ ವರದಿಯ ಪ್ರಕಾರ ಸ್ವಲ್ಪ ಉಬ್ಬರವಿಳಿತ ಇರುವ ಸಾಧಾರಣಕ್ಕಿಂತಾ ಹೆಚ್ಚಿನ ಪ್ರೆಶರ್ ಇರುವ ಸ್ಥಿತಿ ನಿರೀಕ್ಷಿಸಲಾಗಿತ್ತು. ಅದಕ್ಕೆಲ್ಲಾ ಸಮುದ್ರಸಖ ವೈಜ್ಞಾನಿಕವಾಗಿ ಸನ್ನದ್ಧವಾಗಿದ್ದ ನೌಕೆ.

ಶ್ರೀಲಂಕಾದಿಂದ ದಕ್ಷಿಣಕ್ಕೆ ಸಾಗಿದ ನೌಕೆ ಈಗ ನಾಲ್ಕು ಗಂಟೆ ಕಾಲ ಅವಧಿಯಲ್ಲಿ ಅಲ್ಲಿಂದ ಸಹಸ್ರಾರು ನಾಟಿಕಲ್ ಮೈಲುಗಳ ದೂರ ನಿರ್ಜನ ನೀಲ ಸಾಗರದಲ್ಲಿ ಒಂಟಿಯಾಗಿ ಪಯಣಿಸಿತ್ತು. ನೌಕೆಯ ಅಬ್ಸರ್ವೇಶನ್ ಪೋಸ್ಟಿನಲ್ಲಿ ಸತತವಾಗಿ ಹಾಜರಿದ್ದ ಅವಿನಾಶ್ ಕ್ಯಾಮೆರಾಗಳನ್ನು ಅತ್ತಿತ್ತ ತಿರುಗಿಸುತ್ತಾ ಪರದೆಯ ಮೇಲೆ ಮೂಡುವ ಸುತ್ತಲಿನ ಚಿತ್ರಗಳನ್ನು ಗಮನಿಸುತ್ತಿದ್ದ. ಎರಡು ಆಕ್ಟೋಪಸ್ ಮತ್ತು ಒಂದು ನೀರು ಕುದುರೆಗಳ ಹಿಂಡು ಬಿಟ್ಟರೆ ಕಳೆದ ಒಂದು ಗಂಟೆಯಲ್ಲಿ ಇನ್ಯಾವ ಆಸಕ್ತಿಕರ ದೃಶ್ಯಮಾಹಿತಿಯೂ ಲಭ್ಯವಾಗಿರಲಿಲ್ಲ.

ಆಗಲೇ 1500 ಅಡಿ ಮುಳುಗಿದ್ದರಿಂದ ಆ ಪ್ರದೇಶದ ಸ್ಯಾಟೆಲೈಟ್ ಇಮೇಜಸ್ ಅಂದರೆ ನಮ್ಮ ದೇಶದ ಉಪಗ್ರಹ ಚಿತ್ರಗಳೂ ಸ್ಪಷ್ಟವಾಗಿ ಮೂಡುತ್ತಲಿಲ್ಲ, ಬ್ಲ್ಯಾಂಕ್ ಔಟ್ ಆಗುತ್ತಿದೆ. ಇದೊಂದು ಆಧುನಿಕ ಸ್ಟೆಲ್ತ್ ಸಬ್ಮೆರೀನ್ ಆದಾಗ್ಯೂ..

“ಅವರದೂ ಮೋಸ್ಟ್ಲೀ ಇಂತದೇ ಸ್ಟೆಲ್ತ್ (ಸಿಗ್ನಲ್ಲುಗಳಿಗೆ ಕಾಣಿಸಿಗದ) ನೌಕೆ ಇರಬಹುದು ಸರ್...”ಅವನ ಯೋಚನೆಯನ್ನೇ ಬಿಂಬಿಸುವಂತೆ ನುಡಿದ ಅನುಪಮ್.

“ ಖಂಡಿತಾ ಅವರು ಚೀನಾ ಮತ್ತು ಸ್ವೀನ್ ದೇಶದ ಸಬ್ಮೆರೀನುಗಳನ್ನು ಕದ್ದು ತಾವೇ ಇನ್ನೂ ಆಧುನಿಕವಾಗಿ ಅಳವಡಿಸಿಕೊಂಡಿದ್ದಾರೆ. ಅದರಲ್ಲಿ ಸೋನಾರ್ ಡಿಟೆಕ್ಷನ್ ಕೂಡಾ ಇದೆಯಂತೆ.. ಶಬ್ದವೇಧಿ ಸೌಕರ್ಯ” ಎಂದನು ಅವಿನಾಶ್ ಯೋಚಿಸುತ್ತಾ.

“ವೆಲ್, ನಾವೂ ಇದಕ್ಕೆ ಅಂತಾ ಸೋನಾರ್ ಸೌಕರ್ಯ ಹಾಕಿ ಆರು ತಿಂಗಳೇ ಆಯಿತಲ್ಲ!” ಎಂದು ಕಿರು ನಗೆ ಬೀರಿದನು ಜಿತೇಂದ್ರ ಅವಿನಾಶನಿಗೆ ತಿಳಿಯದ ಈ ವೈಶಿಷ್ಟವನ್ನು ಪ್ರಕಟಿಸುತ್ತಾ.

“ಹೌದೇ?” ಅವಿನಾಶ್ ವಿಜಯನಗೆ ಬೀರಿದ. “ನಾನು ಈ ವಿಷಯ ಸಂಗ್ರಹಿಸುವುದರಲ್ಲಿ ಸೋತಿದ್ದೆ ಅನ್ನಿ”

“ನಿಮ್ಮ ಬಾಸ್ ಡಾ. ದೇಸಾಯಿ ಇದನ್ನು ಅಲ್ಟ್ರಾ ಸೀಕ್ರೆಟ್ ಎಂದು ಯಾರಿಗೂ ಹೇಳಿಲ್ಲ. ಇದು ರಹಸ್ಯವಾದ ಪ್ರಮುಖ ಅಂತರರಾಷ್ಟ್ರಿಯ ಮಿಷನ್ ಎಂದು ನಮಗಾಗಿ ಈ ನೌಕೆ ಕೊಟ್ಟಿದ್ದಾರೆ!” ಅನುಪಮ್ ತಿಳಿಸಿದ.

ಎದುರಿಗೆ ಗೋಡೆಯ ಮೇಲೆ ನೇತು ಹಾಕಿದ್ದ ಲೆಮೂರಿಯಾದ ಪ್ರಾಚೀನ ನಕ್ಷಯನ್ನು ನೋಡಿ, ಜಿತೇಂದ್ರ ಕೇಳಿದ.

“ಸರ್, ನೀವು ನಮಗೆ ಬಾಸ್‌ಗೆ ಹೇಳಿದ ವಿಷಯಗಳನ್ನೆಲ್ಲಾ ಹೇಳಿದಿರಿ. ಆದರೆ,

ಲೆಮೂರಿಯಾ ಅಥವಾ ಕುಮಾರಿಕಂಡಂ ಮುಳುಗಿ ಹೋದದ್ದೇಕೆ ಹೇಳಲಿಲ್ಲವಲ್ಲ... ಸಮಯವಿದ್ದರೆ ಹೇಳಿ...”

ಅನುಪಮ್ ನಕ್ಷೆಯನ್ನೇ ದಿಟ್ಟಿಸುತ್ತಾ ನುಡಿದನು,

“ಇದೆಲ್ಲಾ ಲಕ್ಷಾಂತರ ವರ್ಷಗಳ ಹಿಂದೆ ನಡೆದಿದ್ದು. ಆ ನಂತರ ಭೂಮಿ ಪುನರ್ರಚಿತವಾಗಿ, ಮಾನವ ಆದಿಮಾನವನಿಂದ ಈಗಿನವರೆಗಿನ ಕತೆ ಮಾತ್ರ ಖಚಿತವಾಗಿ ಹೇಳಬಹುದು. ಮಿಕ್ಕಿದ್ದಕ್ಕೆಲ್ಲಾ ಸಾಕ್ಷಿ ಆಧಾರ ಕೇಳಿದರೆ ಇಲ್ಲ. ಕಾಲಗರ್ಭದಲ್ಲಿ ಮುಳುಗಿಹೋದ ಘಟನಾವಳಿ.

...ಆ ಕಾಲದಲ್ಲಿ ಒಮ್ಮೆ ಭೂಮಿಯಲ್ಲಿ ಭೀಕರವಾದ ಪ್ರವಾಹ ಉಕ್ಕಿ ಹರಿದು ಹಲವು ಭೂ-ಪ್ರದೇಶಗಳನ್ನು ನುಂಗಿ ಹಾಕಿತಂತೆ. ಅದನ್ನು ಮಾತ್ರ ಈಗಿನ ಭೂ ವಿಜ್ಞಾನಿಗಳು ನಂಬುತ್ತಾರೆ. ಕಾಂಟಿನೆಂಟಲ್ ಡ್ರಿಫ್ಟ್ ಆಯಿತು ಎಂದು ... ಅದರ ಕಾರಣ ಭೂಕಂಪವೆನ್ನಿ ಸುನಾಮಿಯೆನ್ನಿ ಪ್ರಳಯವೆನ್ನಿ ಅದೇನೋ ಸೃಷ್ಟಿರಹಸ್ಯ... ಆದರೆ ಈ ಜಾನಪದ ಕತೆಯಲ್ಲಿ ಹೇಳಿಕೊಂಡು ಬಂದಿರುವ ಪ್ರಕಾರ- ಸಸ್ಯಾಹಾರಿಗಳೂ, ಅಹಿಂಸಾಪ್ರಿಯರೂ ಆದ ಲೆಮೂರಿಯನ್ನರು ಯಾವ ಪ್ರಾಣಿಯನ್ನೂ ಕೊಲ್ಲಲಿಲ್ಲವಂತೆ. ಸಮೃದ್ಧ ಜಲರಾಶಿ ಮತ್ತು ನಿರ್ಮಲ ಹವೆಯ ಕಾರಣ ಹಲವು ದೊಡ್ಡ ದೊಡ್ಡ ಕ್ರೂರ ಪ್ರಾಣಿಗಳ ಸಂಖ್ಯೆ ಹೆಚ್ಚಾಗುತ್ತಾ ಹೋಯಿತಂತೆ...ಆದರೆ ಕೊಲ್ಲುವುದನ್ನು ಇಚ್ಚಿಸದ ಪಾಪದ ಜನ ಅದಕ್ಕೇ ಆಹಾರವಾಗತೊಡಗಿದರು... ಡೈನೊಸಾರಸ್‌ಗಿಂತಲೂ ದೈತ್ಯ ಪ್ರಾಣಿಗಳು ರಾಜಾರೋಷಾಗಿ ಜನರ ವಸತಿಗಳಿಗೆ ನುಗ್ಗಿ ಈ ಬಡಪಾಯಿಗಳನ್ನು ನುಂಗತೊಡಗಿದವಂತೆ...ಲೆಮೂರಿಯನ್ನರು ಚಿನ್ನದ ಪಿರಮಿಡ್ಡುಗಳಲ್ಲಿ ಹೋಗಿ ಅವುಗಳಿಂದ ರಕ್ಷಣೆ ಪಡೆಯಲು ಅವಿತುಕೊಳ್ಳತೊಡಗಿದರಂತೆ...ಆಗಲೆ ಹೆಚ್ಚೆಚ್ಚು ಬೃಹತ್ ಗಾತ್ರದ ಅಂದರೆ 4 ಅಡಿಗೂ ಹೆಚ್ಚಿನ ದಪ್ಪದ ಸಾಲಿಡ್ ಬಂಗಾರದ ಕೋಟೆ ಕಟ್ಟಿ ರಕ್ಷಿಸಿಕೊಳ್ಳಲು ಮುಂದಾದರಂತೆ... ಅದೇ ಸಮಯದಲ್ಲಿ ಈಗಿನ ಯುರೋಪ್ ಇದ್ದ ಪ್ರದೇಶದಲ್ಲಿ ಅಟ್ಲಾಂಟಿಸ್ ಎಂಬ ಇನ್ನೊಂದು ನಾಗರೀಕತೆ ಪ್ರವರ್ಧಮಾನದಲ್ಲಿತ್ತು. ಅವರು ವೈಜ್ಞಾನಿಕವಾಗಿ ಈಗಿನ ನಮ್ಮ ನಾಗರೀಕತೆಗಿಂತಲೂ ಮುಂದುವರೆದು ಗ್ಯಾಮಾ ಮಾದರಿ ಅಣ್ವಸ್ತ್ರಗಳನ್ನು ಹೊಂದಿದ್ದರಂತೆ. ಅವರು ತಮ್ಮ ನೆರೆಯ ಲೆಮೂರಿಯನ್ನರ ದೀನ ಪಾಡು ಕಂಡು ಮರುಗಿ ಅಲ್ಲಲ್ಲಿ ಐದು ಚಿಕ್ಕ ಅಣ್ವಸ್ತ್ರಗಳನ್ನು ಸ್ಫೋಟಿಸಿ ದೈತ್ಯ ಕ್ರೂರ ಪ್ರಾಣಿಗಳ ಲಕ್ಷೋಪಲಕ್ಷ ಸಂತತಿಯಿದ್ದ ಪ್ರದೇಶಗಳನ್ನೂ ಧ್ವಂಸ ಮಾಡಿ ಅವನ್ನು ಕುಲಸಮೇತ ಮುಗಿಸಿಬಿಡಲು ಒಂದು ಯೋಜನೆ ಮುಂದಿಟ್ಟರು. ಅದಕ್ಕೂ ಲೆಮೂರಿಯನ್ನರು ಒಪ್ಪಲಿಲ್ಲ. ಆದರೆ ಈ ಪ್ರಾಣಿಗಳ ಸಂಖ್ಯೆ ಹೆಚ್ಚುತ್ತಾ ಹೋಗಿ ಅವು ಅಟ್ಲಾಂಟಿಸ್ ಪ್ರದೇಶವನ್ನೂ ಪ್ರವೇಶಿಸಿದಾಗ ನಿರ್ವಾಹವಿಲ್ಲದೇ ಅಟ್ಲಾಂಟಿಕರು ಲೆಮೂರಿಯನ್ನರ ವಿರೋಧದ ನಡುವೆಯೂ ಐದು ಆಯ್ದು ಸ್ಥಳಗಳಲ್ಲಿ ಬಾಂಬುಗಳನ್ನು ಸ್ಫೋಟಿಸಿಯೇ ಬಿಟ್ಟರಂತೆ... ಆದರೆ ಅವರು ನಿರೀಕ್ಷಿಸಿರದ ರೀತಿಯಲ್ಲಿ ಭೂಮಿ ಪ್ರತ್ಯುತ್ತರ ನೀಡಿತು. ಪ್ರಾಣಿಗಳು ಮಾತ್ರವಲ್ಲ, ಇಡೀ ಭೂಮಿಯ ನೆಲಪ್ರದೇಶಗಳೇ ಆ ಸ್ಫೋಟಗಳಿಗೆ ತತ್ತರಿಸಿ ಮುಳುಗಿಹೋದವಂತೆ... ಬೆರಳಣಿಕೆಯಷ್ಟು ಜನತೆ ಮಾತ್ರ ಅತ್ತ ಆಫ್ರಿಕಾ , ಇತ್ತ ದಕ್ಷಿಣ ಭಾರತ, ಮಿಕ್ಕವರು ಈಗಿನ ಯೂರೋಪಿಗೆ ಜೀವ ಬಚಾಯಿಸಿಕೊಳ್ಳಲು ವಲಸೆ ಬಂದರಂತೆ.. ಮಿಕ್ಕ ಲೆಮೂರಿಯಾ, ಅಟ್ಲಾಂಟಿಸ್ ಖಂಡ ಅದರ ಜನ, ಪ್ರಾಣಿ, ಅಲ್ಲಿನ ಸಂಪತ್ತು ಎಲ್ಲಾ ಪೂರ್ತಿ ಮುಳುಗಿ, ನಿಧಾನವಾಗಿ ಭೂಭಾಗಗಳು ದೂರದೂರಕ್ಕೆ ಹಂಚಿಹೋದವಂತೆ... ಆ ಖಂಡದ ಪಳೆಯುಳಿಕೆಗಳು ಇಷ್ಟು ಲಕ್ಷವರ್ಷದ ನಂತರ 'ಇಫ್ ಅಂಡ್ ಬಟ್' ದಂತಕತೆಯಾಗಿ ಉಳಿದು ಕಡಲುಗಳ್ಳರನ್ನೂ, ಲೂಟಿಕೋರರನ್ನ ಮಾತ್ರ ಆಕರ್ಷಿಸುತ್ತಲೇ ಇದೆ... ಅಂತವರಲ್ಲೊಬ್ಬ ಈ ಸ್ಪ್ಯಾನಿಷ್ ಕಡಲುಚೋರ ಮತ್ತು ಅವನ ಎರಡು ಹಡಗುಗಳನ್ನೇ ನಾವು ಮತ್ತು ರಾಮಿರೆಜ್ ಹುಡುಕಲು ಬಂದಿರುವುದು..."

"ಇಂತಹದೇ ದೃಷ್ಟಾಂತ- ಬೈಬಲ್ಲಿನ ನೋಆಹ್ಸ್ ಆರ್ಕ್ ಕತೆಯಲ್ಲೂ ಪ್ರಳಯ ಬಂದ ವರ್ಣನೆಯಿದೆ." ಎಂದ ಅನುಪಮ್ ನೆನೆಪಿಸಿಕೊಳ್ಳುತ್ತಾ...

"ನಿಜ, ಆದರೆ ಇಲ್ಲದ್ದನ್ನು ಪ್ರೂವ್ ಮಾಡು ಎಂದರೆ ಹೇಗೆ ಸಾಧ್ಯ?.. ಈಗ ನಮಗೇನಾದರೂ ಸಿಕ್ಕರೂ ಲೋಕಕ್ಕೆ ನಾವು ಪೂರ್ತಿ ಇತಿಹಾಸವನ್ನು ನಂಬಿಸಲಾರೆವು..." ಎಂದ ಅವಿನಾಶ್ ಅಸಹಾಯಕತೆ ತೋಡಿಕೊಳ್ಳುತ್ತಾ.

“ಹಾಗಾದರೆ ಈ ಪ್ರಳಯನಂತರದ ಶಾಂತ ಭೂಮಿಯಲ್ಲಿ ಹುಟ್ಟಿದ ಆದಿಮಾನವನಿಗೆ ಸಹಜವಾಗಿಯೇ ಕೊಂದು ತಿನ್ನುವ ಗುಣ ಡಿ ಎನ್ ಎ ನಲ್ಲಿಯೇ ಬಂದಿತ್ತೇನೋ?... ಕಾಲ ಕಲಿಸಿದ ಲೆಮೂರಿಯಾ ಪಾಠದ ಫಲವಾಗಿ, ಅವನು ತಿಳಿಯದೆಯೇ ಸಸ್ಯಾಹಾರವನ್ನು ಬಿಟ್ಟು ಭೇಟೆ ಆಡಿ ಕೊಂದು ಮಾಂಸಾಹಾರವನ್ನು ಭಕ್ಷಿಸಲು ಅನಿವಾರ್ಯವಾಗಿ ಕಲಿತ ಎಂದೂ ಒಂದು ಕಡೆ ಓದಿದ್ದೇನೆ ಸರ್” ಎಂದು ನೆನೆಸಿಕೊಂಡ ಅನುಪಮ್.

“ಅಂದಹಾಗೇ ಸರ್, ಈ ಸ್ಪ್ಯಾನಿಶ್ ಹಡಗಿನವರಿಗೆ 16ನೇ ಶತಮಾನದಲ್ಲಿ ಈ ಚಿನ್ನ ಪತ್ತೆಯಾಗಿದ್ದಾದರೂ ಹೇಗೆ?” ಎಂದ ಜಿತೇಂದ್ರ.

“ಆಗೆಲ್ಲ ಬೌದ್ಧ ಧರ್ಮೀಯರು ಶ್ರೀಲಂಕಾ, ಮಲೇಶಿಯಾ ಮತ್ತಿತರ ದ್ವೀಪಗಳಲ್ಲಿ ಬಹು ಸಂಖ್ಯಾತರಾಗಿದ್ದರು. ಅವರು ಈ ಜಾನಪದದ ಕತೆಯನ್ನಲ್ಲದೇ ಸ್ವಲ್ಪ ಅಳಿದುಳಿದ ಬಂಗಾರದ ನಿಧಿಯನ್ನು ಕಾದುಕೊಂಡು ರಕ್ಷಣೆ ಮಾಡಿ ಅಲ್ಲಲ್ಲಿ ಅಡಗಿಸಿರುತ್ತಿದ್ದರಂತೆ. ಅಂತದೇ ಯಾರೋ ಬೌದ್ಧ ಸನ್ಯಾಸಿ ಭಿಕ್ಷುಗಳು ಇವರಿಗೆ ಸಿಕ್ಕಿರಬೇಕು. ಅವರ ಮೂಲಕ ಇವರಿಗೆ ರಹಸ್ಯತಾಣದಲ್ಲಿ ಅಡಗಿದ್ದ ಚಿನ್ನದ ನಿಕ್ಷೇಪ ಕೈಗೆ ಸಿಕ್ಕಿರಬೇಕು...ಅದರ ಇಂದಿನ ಬೆಲೆಯನ್ನು ನಾವು ಊಹಿಸಬಹುದು, ಕಲ್ಪಿಸಿಕೊಳ್ಳಬಹುದಷ್ಟೇ ವಿನಾ ನಿಖರವಾಗಿ ಹೇಳಲಾಗದು” ವಿವರಿಸಿದ ಅವಿನಾಶ್.

5

’ಸಮುದ್ರಸಖ’ ಸಾಗರದಡಿ ಪ್ರಯಾಣ ಮಾಡುತ್ತಾ 20 ಗಂಟೆಗಳ ಸತತ ಶೋಧದ ನಂತರ ಕೊನೆಗೂ ದೂರದಲ್ಲಿ ಕಡಲುಗಳ್ಳರ ನೌಕೆಯೂ ಜಲದಡಿ ಮಸುಕಾದ ಸೋನಾರ್ ಸಿಗ್ನಲ್ ಆಗಿ ಕಾಣಿಸಿತು.

“ಸಿಕ್ಕಿತು... ನಮ್ಮ ಮಾಹಿತಿ ಪ್ರಕಾರ ಬೇರೆ ಯಾವ ನೌಕೆಯೂ ಈ ಸ್ಥಳದ ಆಸುಪಾಸಿನಲ್ಲಿಲ್ಲ. ಏನು ಮಾಡೋಣ ಸರ್?” ಪ್ರಶ್ನಿಸಿದ ಜಿತೇಂದ್ರ.

“ನಾನು ರೇಡಿಯೊದಲ್ಲಿ ಮಾತಾಡುತ್ತೇನೆ”ಎಂದು ಜವಾಬ್ದಾರಿ ವಹಿಸಿಕೊಂಡ ಅವಿನಾಶ್. ಇದು ಈ ಆಪರೇಷನ್ನಿನ ಗುರುತರವಾದ ಭಾಗವಾಗಿತ್ತು .

“ಐ ಎನ್ ಎಸ್ ಸಮುದ್ರಸಖ ಹಿಯರ್, ಪ್ಲೀಸ್ ರೆಸ್ಪಾಂಡ್ ಓವರ್!”

ಸ್ವಲ್ಪ ಪ್ರಯತ್ನಗಳ ನಂತರ ಅಲ್ಲಿಂದ ಉತ್ತರ ಬಂದಿತು.

“ಬಾರ್ಸಿಲೋನಾ ಹಿಯರ್” ಕಠಿಣವಾದ ಧ್ವನಿಯೊಂದು ಗೊರಗುಟ್ಟಿತು.

“ನಾವು ಪ್ರೈವೇಟ್ ಸಂಚಾರ ಮಾರ್ಗದಲ್ಲಿದ್ದೇವೆ. ನಿಮ್ಮ ಜತೆ ನಮಗೆ ಯಾವುದೇ ಕೆಲಸವಿಲ್ಲ..”

“ರಾಮಿರೆಜ್ ಅಲ್ಲಿದ್ದಾರೆಯೆ?” ಅವಿನಾಶ್ ನೇರ ಪ್ರಶ್ನೆ

“ನಾನೇ ಮಾತನಾಡುತ್ತಿದ್ದೇನೆ. ನಿಮ್ಮ ದಾರಿ ನೀವು ನೋಡಿಕೊಳ್ಳಿ” ಒರಟು ಉತ್ತರ ಕಡಲುಚೋರ ಅಪರಾಧಿಗೆ ಸಹಜವೇ.

“ರಾಮಿರೆಜ್, ನಾನು ಭಾರತೀಯ ನೇವಿಯ ಕ್ಯಾಪ್ಟನ್ ಅವಿನಾಶ್ ನಾಯಕ್ ಮಾತಾಡುತ್ತಿದ್ದೇನೆ. ನಿಮ್ಮ ನೌಕೆಯನ್ನು ಪರೀಕ್ಷಿಸಿ ಆದರಲ್ಲಿ ನೀವು ಹೊತ್ತೊಯ್ಯುತ್ತಿರುವ ಅಕ್ರಮ ಬಂಗಾರವನ್ನು ವಶಪಡಿಸಿಕೊಳ್ಳಲು ಬರುತ್ತೇವೆ...ನಮಗೆ ಅನುಮತಿ ಕೊಟ್ಟು ಬಾಗಿಲು ತೆರೆಯಿರಿ, ಇದು ನಮ್ಮ ಎರಡೂ ದೇಶಗಳ ಸರಕಾರಿ ಆಜ್ಞೆ!” ಅವಿನಾಶನ ಅಧಿಕಾರವಾಣಿ ಸ್ಪಷ್ಟ ಸಂದೇಶ ನೀಡಿತ್ತು

“ಅಯ್ಯೋ ಹುಚ್ಚಪ್ಪ, ನೀನು ಕ್ಯಾಪ್ಟನ್ ಅಲ್ಲ, ಯಾರೋ ಮುಗ್ಧ ಬಾಲಕನಿರಬೇಕು... ನಾವು ಈಗ ಅಂತರರಾಷ್ಟ್ರೀಯ ಜಲಸೀಮೆಯಲ್ಲಿದ್ದೇವೆ ...ನಿನಗೆ ಅನುಮತಿ ಕೊಡಲು ನಮಗೆ ಯಾವ ದರ್ದೂ ಇಲ್ಲ...”ಗಹಗಹಿಸಿದ ಅಲ್ಲಿಂದ ರಾಮಿರೆಜ್.

“ರಾಮಿರೆಜ್, ನಿನ್ನ ಕುಕೃತ್ಯಗಳಿಗೆ ಮಂಗಳ ಹಾಡುವ ಸಮಯ ಬಂದಿದೆ. ಆದರೆ ಒಂದೇ ಒಂದು ಒಳ್ಳೇ ಕೆಲಸ ಅದಕ್ಕೆ ಮುನ್ನ ಮಾಡಿಬಿಡು... ನಮ್ಮ ಒಂದು ಸಬ್ಮೆರೀನಿನ ಮೇಲೆ ದಾಳಿ ಮಾಡಿ ಅದನ್ನು ನಿಷ್ಕ್ರಿಯಗೊಳಿಸಿದ್ದೀಯೆ. ಆದರಲ್ಲಿ ನಮ್ಮ ಸಿಬ್ಬಂದಿ ಸಿಕ್ಕಿಹಾಕಿಕೊಂಡಿದ್ದಾರೆ, ಅಲ್ಲಿಂದ ಸಿಗ್ನಲ್ ಬರುತ್ತಿಲ್ಲ, ಹಾಗಾಗಿ ಅವರನ್ನು ನಾವು ಹುಡುಕಲು ಸಾಧ್ಯವಾಗಿಲ್ಲ. ಕೊನೆಯಲ್ಲಿ ಅವರನ್ನು ನೋಡಿದ್ದು ನೀವೆ.. ಅವರ ಪತ್ತೆಯಾಗುವ ಸ್ಥಳವನ್ನು ಹೇಳಲೇಬೇಕು. ಇದು ನೌಕಾ ಧರ್ಮ ಮತ್ತು ಕಾನೂನು!” ಗದರಿಸಿದಂತೆ ನುಡಿದಿದ್ದ ಅವಿನಾಶ್.

"ಐ ನ್ ಎಸ್ ಜಲಮಿತ್ರ ಅಲ್ಲವೆ?” ಅತ್ತ ಕೇಕೆ ಹಾಕಿದ ಆ ನೌಕೆಯ ಹೆಸರನ್ನು ಹೇಳುತ್ತಾ ರಾಮಿರೆಜ್. “ಬಂಚ್ ಆಫ್ ಬಫೂನ್ಸ್. ನಮ್ಮನ್ನು ಶರಣಾಗಲು ಹೇಳಿದರು... ನಾಲ್ಕು ಬಿಗಿದೆವು ನೋಡಿ... ಗಾಯಗೊಂಡು ಸಾಗರದ ಒಂದು ಮೂಲೆಯಲ್ಲಿ ಬಿದ್ದಿದ್ದಾರೆ.”

“...”

“ಹೋಗಲಿ...ಪಾಪಾ.. ಅವರ ಅಕ್ಷಾಂಶ, ರೇಖಾಂಶ ತೆಗೆದುಕೊಳ್ಳಿ... ಅವರ ಜೀವ ಬಚಾವು ಮಾಡಿ, ಇನ್ನೊಮ್ಮೆ ನನ್ನ ಸುದ್ದಿಗೆ ಬರದಿರುವಂತೆ ಹೇಳಿಬಿಡಿ” ಎಂದು ಕೆಲವು ಸಂಖ್ಯೆಗಳನ್ನು ಆ ನಾಪತ್ತೆಯಾದ ಸಬ್ಮೆರೀನಿನ ದಿಕ್ಸೂಚಿಯಾಗಿ ಹೇಳಿದ ರಾಮಿರೆಜ್.

ಅವಿನಾಶ್ ತಾಳ್ಮೆಯಿಂದ ತನ್ನ ಕೊಚ್ಚಿನ್ ನೌಕಾ ಹೆಡ್ಕ್ವಾರ್ಟರ್ಸಿಗೆ ಅದರ ಸೂಚನೆಯನ್ನು ಕಳಿಸಿದ. ಅಲ್ಲಿನವರು ತಕ್ಷಣವೇ ಆ ನಾಪತ್ತೆಯಾದ ನೌಕೆಯ ಸಮೀಪವೇ ತೇಲುತ್ತಿದ್ದ ಒಂದು ರೆಡ್ ಕ್ರಾಸ್ ಗೆ ಸೇರಿದ ಸಂರಕ್ಷಣಾ ಹಡಗಿಗೆ ಅದರ ನಕ್ಷಾ ವಿಳಾಸ ಕೊಟ್ಟು ಅವರನ್ನು ರಕ್ಷಿಸಲು ಮುಂದಾದರು. ಅದು ಶೀಘ್ರವಾಗಿ ಏರ್ಪಾಡಾಗಿದ್ದಕ್ಕೆ ಸಮಾಧಾನದ ನಿಟ್ಟುಸಿರಿಟ್ಟು ಮತ್ತೆ ಈ ಸಮಸ್ಯೆಯತ್ತ ತಿರುಗಿದ ಅವಿನಾಶ್.

“ಧನ್ಯವಾದ ರಾಮಿರೆಜ್, ಆದರೆ ನಿನ್ನ ಆಟ ಮುಗಿಯಿತು ಎಂದುಕೋ... ನಾನಂತೂ ನಿನ್ನ ಬೆಂಬೆತ್ತಿಯೇ ಕಳೆದ ಒಂದು ವರ್ಷ ಕಳೆದಿದ್ದೇನೆ. ನಿನ್ನನ್ನು ಲಂಡನ್ನಿಗೆ ಬಂಧಿಸಿ ಕರೆತಂದಾಗ ಕೂಡಾ ಅಲ್ಲಿ ಸ್ಪೆಷಲ್ ಮಿಷನ್ ಮೇಲೆ ನಾನಲ್ಲೇ ಇದ್ದೆ, ಆದರೆ ನೀನು ಕಣ್ಮರೆಯಾದಾಗ ಅಚ್ಚರಿಪಟ್ಟಿದ್ದು ನಿಜ....ಇನ್ನು ನನ್ನಿಂದ ನೀನು ತಪ್ಪಿಸಿಕೊಳ್ಳಲಾರೆ, ನಾವೂ ಸಶಸ್ತ್ರರಾಗಿಯೇ ಬಂದಿದ್ದೇವೆ...ಶರಣಾಗುತ್ತೀಯೋ ಇಲ್ಲವೋ?”

ಅಷ್ಟರಲ್ಲಿ ಅನುಪಮ್ ಮತ್ತು ಜಿತೇಂದ್ರರ ನಿರ್ದೇಶನದಲ್ಲಿ ಅವರ ಜಲಾಂತರ್ಗಾಮಿ ನೌಕೆ ಶತ್ರು ಸಬ್ಮೆರೀನಿನ ಸಮೀಪವೇ ತಲುಪಿತ್ತು. ಸನಿಹದಲ್ಲಿ ನೀರಿನಡಿ ಮಸುಕಾಗಿ ಕಂಡಿತ್ತು ಬಾರ್ಸಿಲೋನಾ. ಇವರ ಸಬ್‌ಮೆರೀನಿನಂತೆಯೇ ಅದೂ ಸಹಾ ಆಧುನಿಕವಾದ ಸಶಸ್ತ್ರ ವೆಸೆಲ್ ಎಂಬುದರಲ್ಲಿ ಯಾವುದೇ ಅನುಮಾನ ಉಳಿಯಲಿಲ್ಲ.

“ಸಶಸ್ತ್ರನಾಗಿ ಬಂದ ಭಾರತದ ವೀರಯೋಧ!...ದಾಳಿ ಮಾಡಲು ಭಯವೇಕೆ? ನಿಮ್ಮ ಭಗವದ್ಗೀತೆ ಓದಿಕೋ ಹೋಗು...” ಮತ್ತೆ ಕುಹಕವಾಡಿ ಸವಾಲೆಸೆದ ರಾಮಿರೆಜ್.

“ಲಾಸ್ಟ್ ವಾರ್ನಿಂಗ್...” ಅವಿನಾಶ್ ಹೇಳುತ್ತಿರುವಂತೆಯೇ ಬಾರ್ಸಿಲೋನಾ ಸಬ್ಮೆರೀನಿನಿಂದ ಒಂದು ಮಿಸೈಲನ್ನು ಇವರತ್ತ ಉಡಾಯಿಸಿದರು ಕಡಲುಗಳ್ಳರು.

ಜಿತೇಂದ್ರ ಮತ್ತು ಪೈಲೆಟ್ಟೊಬ್ಬನ ಸಕಾಲಿಕವಾಗಿ ತಮ್ಮ ನೌಕೆಯನ್ನು ಪಕ್ಕಕ್ಕೆ ಸರಿಸಿದಾಗ ಜೋರಾಗಿ ಜರ್ಕ್ ಆಯಿತು, ಎಲ್ಲರೂ ನೆಲಕ್ಕೆ ಬಿದ್ದರು. ಅವರ ಅಸ್ತ್ರ ಯಾವುದೇ ಹಾನಿ ಮಾಡದೇ ಪಕ್ಕಕ್ಕೆ ತೂರಿ ದೂರದಲ್ಲಿ ಮರೆಯಾಯಿತು.

ಜಿತೇಂದ್ರನಿಗೆ ಪ್ರತಿದಾಳಿ ಮಾಡಲು ಆಜ್ಞೆಯಿತ್ತ ಅವಿನಾಶ್.

ಸ್ವಲ್ಪ ಮಾತ್ರ ಬಾರ್ಸಿಲೋನಾಗೆ ಹಾನಿಯಾದರೂ ಅದು ಸಂಬಾಲಿಸಿಕೊಂಡಿತು. ದಾಳಿ ಪ್ರತಿದಾಳಿ ಮುಂದುವರೆಯುತ್ತಾ ಹೆಚ್ಚಾಗುತ್ತಲೇ ಹೋಯಿತು.

ಅಲ್ಪ ಸ್ವಲ್ಪ ಆಘಾತ ಎರಡೂ ನೌಕೆಗಳಿಗೆ ಆಗತೊಡಗಿತ್ತು. ಅತ್ತಲಿಂದ ರಾಮಿರೆಜ್ ಅಬ್ಬರಿಸುತ್ತಿದ್ದ... “ಚಿನ್ನವನ್ನು ಸೆಕ್ಯೂರ್ ಮಾಡಿ...ಸಮುದ್ರದ ಅಡಿಗೆ ಜಾರಿಸಿಬಿಡಿ...ಎಲ್ಲಾ ಸರಿಹೋದಮೇಲೆ ಮತ್ತೆ ಹೆಕ್ಕೋಣ” ರೇಡಿಯೋ ಆನ್ ಇದ್ದುದನ್ನು ಮರೆತಿದ್ದ.

ಆದರೆ ಯಾರೋ ಅತ್ತ ಅದನ್ನು ಜ್ಞಾಪಿಸಿದಾಗ, “ಓಹ್, ಬ್ಲಡಿ ಹೆಲ್” ಎಂದು ಕಿರುಚಿ ರೇಡಿಯೋವನ್ನು ಕ್ಲಿಕ್ ಆಫ್ ಮಾಡಿದ ಕಡಲುಚೋರರ ನಾಯಕ.

ಇತ್ತ ಅವಿನಾಶ್ ತರಾತುರಿಯಿಂದ ಹೊರಗೆ ಹೊರಡಲು ಸಿದ್ಧನಾದ. ಅಂಡರ್ ವಾಟರ್ ಸ್ಕೂಬಾ ಸೂಟ್ ಧರಿಸಿ ಆಮ್ಲಜನಕದ ಸಿಲಿಂಡರ್ ಬೆನ್ನಿಗೆ ತಗುಲಿಸಿಕೊಂಡ.

“ಆದಷ್ಟು ಬೇಗ ನಾನೇ ಹೋಗಿ ಅವನನ್ನು ತಡೆಯುವ ಪ್ರಯತ್ನ ಮಾಡುತ್ತೇನೆ... ರಾಮಿರೆಜ್ ಒಬ್ಬನ್ನನ್ನು ಸೆರೆ ಹಿಡಿದರೂ ಪರವಾಗಿಲ್ಲ.. ಮಿಕ್ಕವರೆಲ್ಲ ನಗಣ್ಯ ಸೋಮಾಲಿ ಕಡಲ್ಗಳ್ಳರು...ಪರವಾಗಿಲ್ಲ...ಜಿತೇಂದ್ರ, ಅನುಪಮ್, ಗುಡ್ ಬೈ, ದೇವರ ದಯೆಯಿದರೆ ಎಲ್ಲರನ್ನೂ ಮತ್ತೆ ಸಂಧಿಸುವೆ.. ಗುಡ್ ಬೈ, ಮೇಟ್ಸ್!” ಎಂದು ಅವರ ಕೈ ಕುಲುಕಿ ಸಮುದ್ರದ ದ್ವಾರದ ಚೇಂಬರಿಗೆ ಬಂದನು. ಸ್ವಯಂಚಾಲಿತವಾಗಿ ಪ್ರೆಶರ್ ನಲ್ಲಿದ್ದ ಲೋಹದ ಬಾಗಿಲು ತೆರೆಯಿತು. ಅರೆಕ್ಷಣದಲ್ಲಿ ಕತ್ತಲಿನ ಸಾಗರದಡಿಗೆ ಸುಯ್ಯನೆ ಈಜಿ ಹೋದ ಅವಿನಾಶ್. ಅವನು ಸಬ್‌ಮೆರೀನಿನ ದಕ್ಷಿಣ ದ್ವಾರದಿಂದ ಈಜಿ ಹೊರಟಿದ್ದ.

ಅತ್ತ ರಾಮಿರೆಜ್ ದುರಾಸೆಗೆ ಬಲಿಯಾಗಿಯೇ ಬಿಟ್ಟ. ಅವಿನಾಶ್ ತೇಲಿ ಬರುತ್ತಿದುದದನ್ನು ಗಮನಿಸಿ ತನ್ನನ್ನು ತಾನು ರಕ್ಷಿಸಿಕೊಳ್ಳುವುದು ಅವನಿಗೆ ಮುಖ್ಯವೆನಿಸಿತು. ಭಾರತೀಯ ನೇವಿಯ ಫೈನಲ್ ಅಸಾಲ್ಟ್ ಬರಲು ಹೆಚ್ಚು ಸಮಯ ಮಿಕ್ಕಿಲ್ಲ ಎಂದು ಅವನು ಗ್ರಹಿಸಿದ. ತನ್ನ ಬಳಿ ಶೇಖರಿಸಿಟ್ಟಿದ್ದ ಚಿನ್ನದ ತುಂಡುಗಳ ರಾಶಿಯಿಂದ ಅವಸರದಿಂದ ವಾಟರ್-ಪ್ರೂಫ್ ಬ್ಯಾಕ್ ಪ್ಯಾಕ್ ಒಂದಕ್ಕೆ ಕೆಲವು ಗಟ್ಟಿಗಳನ್ನು ತುಂಬಿಸಿಕೊಳ್ಳತೊಡಗಿದ.

ನೀರಿನಡಿ ಎರಡೂ ನೌಕೆಗಳ ನಡುವೆ ಕಾದಾಟ ತೀವ್ರವಾಗತೊಡಗಿತ್ತು.

ಸೊಮಾಲಿ ಚೋರರು ಭಾರತೀಯ ನೇವಿಯವರ ಗುಂಡೇಟು ಮತ್ತು ಮಿಸೈಲ್ ದಾಳಿಗೆ ತರಗೆಲೆಗಳಂತೆ ಎಲ್ಲೆಂದರಲ್ಲಿ ಗಾಯಗೊಂಡು ಸಾಯುತ್ತಾ ಬೀಳತೊಡಗಿದರು. ತನ್ನ ಶತ್ರುಗಳ ಕೈ ಮೇಲಾಗುತ್ತಿದ್ದಂತೆ ಯಾರಿಗೂ ಹೇಳದೇ ಜೀವ ಬಚಾಯಿಸಿಕೊಳ್ಳಲು ಓಲಾಡತೊಡಗಿದ್ದ ಬಾರ್ಸಿಲೋನಾ ನೌಕೆಯ ಹೊರದ್ವಾರದತ್ತ ಓಡಿದ ಸ್ವಾರ್ಥಿ ರಾಮಿರೆಜ್.

ಆಗಲೇ ಹೆಣಭಾರದಂತೆ ಭುಜ ಕೊರೆಯುತ್ತಿದ್ದ ಬ್ಯಾಕ್ ಪ್ಯಾಕ್ ಅನ್ನು ಏದುಸಿರು ಬಿಡುತ್ತಲೇ ಹೊತ್ತು ಕೈಯಲ್ಲೊಂದು ಗನ್ ಮತ್ತು ಚಾಕು ಹಿಡಿದು ಹೊರಬಂದು ಈಜತೊಡಗಿದ ರಾಮಿರೆಜ್‌ಗೆ ಡಿಕ್ಕಿ ಹೊಡೆವಂತೆ ಎದುರಾದ ಅಲ್ಲೇ ಹೊಂಚು ಹಾಕುತ್ತಾ ಕಾಯುತ್ತಿದ್ದ ಅವಿನಾಶ್!

ಅವಿನಾಶ್ ತನ್ನ ಚಾಕುವಿಂದ ದಾಳಿ ಮಾಡಲು ರಾಮಿರೆಜ್ ತಪ್ಪಿಸಿಕೊಂಡು ಸಾಗರದಡಿಗೆ ನಿಧಾನವಾಗಿ ಮುಳುಗುತ್ತಿದ್ದ ತನ್ನ ಗಾಸಿಗೊಂಡ ನೌಕೆಯ ಮೇಲೆ ಏರಿ ಅವನಿಂದ ದೂರ ಓಡಲೆತ್ನಿಸಿದ.

ಜೀವ ಭಯವೆಂದರೆ ನೋಡಿ, ಅಂತಾ ಅನುಭವೀ ಕಡಲುಗಳ್ಳನ ಕಾಮನ್ಸೆನ್ಸ್ ಸಹಾ ಅವನನ್ನು ತೊರೆಯಿತು. ಎಲ್ಲಿಗೆ ತಾನೇ ಈಜಿಕೊಂಡು ಸಾಗರದಲ್ಲಿ ತಪ್ಪಿಸಿಕೊಳ್ಳಲು ಸಾಧ್ಯ.. 2500 ಅಡಿ ಸಾಗರದ ಮೇಲ್ಮೈ ಕೆಳಗೆ?

ಅವಿನಾಶ್ ಅವನ ಬೆಂಬಿಡದ ಭೂತನಂತೆ ಸುಯ್ಯನೆ ಈಜುತ್ತಾ ಸಮೀಪಿಸಿದ. ಕೆಲವೊಮ್ಮೆ ಇಬ್ಬರೂ ತಂತಮ್ಮ ಗನ್ಸ್ ಉಪಯೋಗಿಸಿದರು. ಕೆಲವೊಮ್ಮೆ ಕೈಲಿದ್ದ ಚೂರಿಯಿಂದ ಕೊಲ್ಲಲು ಯತ್ನಿಸಿದರು. ಇಬ್ಬರೂ ನಿಪುಣರು, ಆದರೆ ಕೊಲ್ಲಲಾಗುತ್ತಿಲ್ಲ!

ಬಲಶಾಲಿ ರಾಮಿರೆಜ್ ಅವಿನಾಶ್ ಕತ್ತು ಕಿವುಚಲು ತನ್ನ ಬಾಹುಗಳನ್ನು ಬಳಸಿದ. ಉಸಿರುಕಟ್ಟುವ ಆ ಸಮಯದಲ್ಲಿ ವಿಧಿಯಿಲ್ಲದೇ ತನ್ನ ಹರಿತವಾದ ಚೂರಿ ಬಳಸಿ ಅವನ ಆಕ್ಸಿಜೆನ್ ಸಿಲಿಂಡರ್ ಕತ್ತರಿಸಿ ಕಿತ್ತು ಹಾಕಿದ ಅವಿನಾಶ್. ಸರ್ರನೆ ಮೂಗು ಬಾಯಿಗೆ ನುಗ್ಗಿದ ನೀರಿಗೆ ರಾಮಿರೆಜ್ ಉಸಿರುಗಟ್ಟಿ ಕಂಗಾಲಾದ. ಆಗ ಸಮಯ ನೋಡಿ ಅವನ ಬ್ಯಾಕ್ ಪ್ಯಾಕನ್ನು ಕತ್ತರಿಸಿ ಕಿತ್ತುಕೊಂಡ ಅವಿನಾಶ್. ಅವನಿಗೆ ಅದರಲ್ಲೇನೋ ಅಮೂಲ್ಯವಾದದ್ದಿರಲೇಬೇಕು ಎಂಬ ಅನುಮಾನ ಬಲವಾಗಿತ್ತು. ಬಾರ್ಸೆಲೋನಾ ಕ್ರಮೇಣ ಐ ಎನ್ ಎಸ್ ಸಮುದ್ರಸಖನ ಸತತವಾದ ಪ್ರಬಲ ಅಸ್ತ್ರಗಳ ದಾಳಿಗೆ ಬಲಿಯಾಯಿತು.

ರಾಮಿರೆಜ್ ನೀರು ಕುಡಿಯುತ್ತಾ ಕೈಗಳನ್ನು ಅಸಹಾಯಕನಾಗಿ ಬಡಿಯುತ್ತಾ ಮುಳುಗುತ್ತಲೇ ಹೋದ. ಅವಿನಾಶ್ ಶತಪ್ರಯತ್ನ ಮಾಡಿ ಅವನನ್ನು ಎಳೆದು ಕರೆದೊಯ್ಯಲು, ಜೀವಸಹಿತ ಬಂಧಿಸಲು ನೋಡಿದ, ಆದರೆ ಎಲ್ಲಾ ಯತ್ನಗಳೂ ವಿಫಲವಾದವು.

ರಾಮಿರೆಜ್ ಆ ಕರಿನೀರಿನ ಗರ್ಭದ ತಳದಲ್ಲೆಲ್ಲೋ ಮುಳುಗಿ ಮಾಯವಾಗಿ ಹೋದ.

ಬಾರ್ಸಿಲೋನಾ ನೌಕೆ ಅದರ ಉಳಿದ ಚೋರರು ಮತ್ತು ಅದರಲ್ಲಿದ್ದ ಲೆಮೂರಿಯಾದ ಕದ್ದ ಸಂಪತ್ತು ಮತ್ತೆ ಸಾಗರ ಸಮಾಧಿಯಾದವು.

ಒಂದು ತರಹದ ಯಶಸ್ಸು ಮತ್ತು ಇನ್ನೊಂದು ತರಹದ ನಿರಾಸೆ ಒಟ್ಟೊಟ್ಟಿಗೇ ಅನುಭವಿಸಿದ ಅವಿನಾಶ್ ತನ್ನ ನೌಕೆ ಐ ಎನ್ ಎಸ್ ಸಮುದ್ರಸಖನಿಗೆ ನಿಧಾನವಾಗಿ ಈಜುತ್ತಾ ಮರಳಿದ.

ಸ್ವಲ್ಪ ಗಾಯಗಳಾದರೂ ಅವನ ಸಿಬ್ಬಂದಿಗೆ ಜೀವಾಪಾಯವಾಗಿರಲಿಲ್ಲ. ಸಮುದ್ರಸಖ ನೌಕೆಗೆ ಕೆಲವು ಬಗೆಯ ಮೆಕ್ಯಾನಿಕಲ್ ಫೈಲ್ಯೂರ್ಸ್ ಮಾತ್ರ ಆದವು, ರಾಮಿರೆಜನ ದಾಳಿಯಿಂದ.

"ಆದರೆ ಇವು ನಾವು ಕೊಚ್ಚಿ ಬೇಸಿಗೆ ಹೋಗಿ ರಿಪೇರಿ ಮಾಡಲಾಗದ್ದೇನೂ ಅಲ್ಲ" ಜಿತೇಂದ್ರ ನುಡಿದ.

ಅನುಪಮ್ ಖುದ್ದಾಗಿ ಪೈಲೆಟ್ ಕರ್ತವ್ಯ ಮಾಡುತ್ತಾ ಆ ನೌಕೆ ಕೊಚ್ಚಿ ನೇವಲ್ ಬೇಸಿನತ್ತ ತೇಲಿ ಹೋಯಿತು.

6

ಮರುದಿನ ಬೆಳಿಗ್ಗೆ 8.30

ಕೊಚ್ಚಿ ನೇವಲ್ ಬೇಸ್ ಕಚೇರಿಯಲ್ಲಿ,

"ನಿನ್ನೆ ರಾತ್ರಿ ತಲುಪಿದ್ದು ಲೇಟಾಯಿತು.. ಈಗ ತಡವಾಗಿ ನಿಮ್ಮನ್ನು ನೋಡಲು ಬರುತ್ತಿದ್ದೇನೆ!" ಎಂದ ಒಳಬಂದ ಅವಿನಾಶ್. ಡಾ ದೇಸಾಯಿ ಖುಶಿಯಿಂದ ತಲೆಯಾಡಿಸಿ ಅವನ ಕೈಕುಲುಕಿದರು,

“ದಟ್ಸ್ ಓಕೆ. ನಿನ್ನೆ ಸಂಜೆಯೇ ಸಬ್ಮೆರೀನಿನಿಂದ ಕಾಲ್ ಮಾಡಿದ್ದೆಯಲ್ಲ... ಹೆಚ್ಚೇನೂ ಗಾಯ ಆಗಲಿಲ್ಲ ತಾನೆ?” ಅವರ ದನಿಯಲ್ಲಿ ಸಹಜ ಕಳಕಳಿಯಿತ್ತು. ಅವರೇ ಬೆಳಿಗ್ಗೆ ಬಂದರೆ ಸಾಕು ಎಂದು ಸಂದೇಶ ರವಾನಿಸಿದ್ದರು.

“ಅಲ್ಪಸ್ವಲ್ಪ... ನನ್ನ ಕತ್ತಿನ ಮೇಲೆ ಅವನ ಕೈ ಬೆರಳು ಬೀಳುವಂತಾ ಗಾಯಗಳು...ತೊಡೆ, ಬೆನ್ನು ತರಚಿದಂತಾಗಿದೆ ಅಷ್ಟೇ..” ಅವಿನಾಶ್ ಎದುರು ಕುಳಿತುಕೊಳ್ಳುತ್ತಾ ನುಡಿದ.

“ನೀನು ಪೂರ್ತಿ ಮಡಿಕಲ್ ಚೆಕ್-ಅಪ್ ಗೆ ಹೋಗುವುದು ಮರೆಯದಿರು. ರಜೆ ಕೊಡುತ್ತೇವೆ...”

ತನ್ನ ಕಾಲ್ ಬಳಿಯಿಟ್ಟುಕ್ಕೊಂಡಿದ್ದ ಬ್ಯಾಕ್ ಪ್ಯಾಕನ್ನು ಅವರ ಟೇಬಲ್ ಮೇಲಿರಿಸಿದ.

“ಇದೋ ತಗೊಳ್ಳಿ..ಲೆಮೂರಿಯಾದ ಚಿನ್ನ, ರಾಮಿರೆಜ್ ಬ್ಯಾಗಿನಲ್ಲಿತ್ತು” ಎಂದ ಅರ್ಥಗರ್ಭಿತವಾಗಿ.

ಅವರಿಗೆ ಸಹಜ ಕುತೂಹಲದಿಂದ ಹುಬ್ಬು ಮೇಲೇರಿತು.

“ಇದನ್ನು ಹೇಳಿರಲಿಲ್ಲ ನೀನು!.. ವಾವ್.. ಎಲ್ಲಿ ನೋಡುವಾ...” ಎಂದು ಅವರು ಬ್ಯಾಗ್ ಬಿಚ್ಚಿದರು. ಅವರ ಕೈಗೆ ದಪ್ಪ ದಪ್ಪ ಚಿನ್ನದ ಇಟ್ಟಿಗೆ ಚೂರುಗಳು ದೊರಕಿದವು.

ಅದರ ಫಳ ಫಳ ಹೊಳಪು ಇಬ್ಬರ ಕಣ್ಣಿನಲ್ಲಿಯೂ ಮುಂಚಿತು.

“ಇದೇ ಅಲ್ಲವೇ ನೀನು ಹೇಳಿದ ಪ್ರಾಚೀನ ಕಾಲದ ಶುದ್ಧ ಚಿನ್ನ, 24 ಕ್ಯಾರೆಟ್ಸ್ ಗಿಂತಲೂ ಮಿಗಿಲಾದದ್ದು?.. ಇದನ್ನು ನಾವು ಮೊದಲು ಪರೀಕ್ಷಕರ ಬಳಿ ಕಳಿಸಿ ವರದಿ ಪಡೆದು ಅನಂತರ ಸ್ಪೇನ್ ದೇಶಕ್ಕೆ ತಲುಪಿಸಬೇಕು. ನಾನು ಅದನ್ನು ನಿರ್ವಹಿಸುತ್ತೇನೆ..”ಎಂದು ಡಾ. ದೇಸಾಯಿ ಅದನ್ನು ತಮ್ಮ ಕಸ್ಟಡಿಗೆ ತೆಗೆದುಕೊಂಡರು. ಅದನ್ನು ಟೇಬಲ್ ಮೇಲೆ ಜೋಡಿಸಿದರು.

ಅವಿನಾಶ್ ಅವರಿಗೆ ತನ್ನ ಪೂರ್ಣವರದಿಯನ್ನು ಕೊಟ್ಟ ನಂತರ ಇಬ್ಬರೂ ಕ್ಯಾಂಟೀನಿನಿಂದ ತರಿಸಿದ ಕಾಫಿ ತಿಂಡಿ ಸೇವಿಸಿದರು.

“ಅವಿನಾಶ್...” ಡಾ. ದೇಸಾಯಿ ನುಡಿದರು, “ ನಿನ್ನ ಈ ಆಪರೇಶನ್ ಸಕ್ಸೆಸ್ ಎಂದೇ ನಾವು ಸರಕಾರದಿಂದ ಪರಿಗಣಿಸುತ್ತೇವೆ. ಅಲ್ಲದೇ ನಿನ್ನ ಅದ್ಭುತ ಸಾಹಸ ಸಾಧನೆಗೆ ದೇಶ ಋಣಿಯಾಗಿರುತ್ತದೆ...ಇದನ್ನು ನಾನು ಅಧಿಕೃತವಾಗಿ ಹೇಳುತ್ತಿದ್ದೇನೆ...ಆದರೆ ನನಗೊಂದು ಅನುಮಾನ ಕಾಡುತ್ತಲೇ ಇದೆ.. ಕೇಳಲೆ?”

“ಯೆಸ್ ಸರ್!”

“ಈ ಲೇಮೂರಿಯಾದ ಚಿನ್ನ, ನಿಧಿ ಅದೇನೇನಿತ್ತೋ...ಅದನ್ನು ಯಾಕೆ ಯಾರೂ ಪಡೆಯಲು ಸಾಧ್ಯವೆ ಆಗುತ್ತಿಲ್ಲ?...ಮೊದಲು ಆ ಕಾಲದಲ್ಲೇ ಸ್ಪ್ಯಾನಿಶ್ ನಾವಿಕ ಕ್ಯಾಪ್ಟನ್ ಸಾಂಚೆಜ಼ನ ಹಡಗು ಮುಳುಗುತ್ತದೆ... ನಂತರ ಈಗ ರಾಮಿರೆಜ್‌ನ ನೌಕೆಯೂ ಸಾಗರತಳ ಸೇರುತ್ತದೆ... ಈ ಸ್ಯಾಂಪಲ್ ಬಿಟ್ಟು ಮಿಕ್ಕಿದ್ದೇನೂ ನಮಗೆ ವಶವಾಗುವುದಿಲ್ಲ...ಯಾಕೋ?”

ಅವಿನಾಶ್ ಮಾರ್ಮಿಕವಾಗಿ ನಕ್ಕ. ”ಸರ್, ಅದಕ್ಕೆ ಕಡಲಿನ ಮಂದಿಯ ನಂಬಿಕೆಯೊಂದಿದೆ.. ಲೇಮೂರಿಯನ್ನರು ಅದನ್ನು ಇಂದಿಗೂ ಕಾಯುತ್ತಿದ್ದಾರೆ, ಬೇರೆ ಯಾರಾದರೂ ಕದ್ದೊಯ್ದರೆ ಅವರ ಶಾಪದ ಫಲವಾಗಿ ಅಥವಾ ಅವರ ಅಸಾಧಾರಣ ಅತೀಂದ್ರಿಯ ಶಕ್ತಿಯ ಫಲವಾಗಿ ಒಂದು ಪ್ರಕೃತಿ ಸಹಜ

ವಿಕೋಪವಾಗಿ ಅವಗಢ ಸಂಭವಿಸಿ ಮತ್ತೆ ಅಲ್ಲೇ ಮುಳುಗುತ್ತದೆ ಅಥವಾ ಒಬ್ಬರನ್ನೊಬ್ಬರು ಕೊಂದು ಕಳೆದುಕೊಳ್ಳುತ್ತಾರೆ ಎಂದು...ಆದರೆ ಇದೊಂದು ದಂತಕತೆ...ಜಾನಪದ ಸೀಮೆಯಲ್ಲಿ ಬರುತ್ತದೆ..." ಎಂದು ಅಲ್ಲೇ ಮೊಟಕುಗೊಳಿಸಿದ.

"ಅದೇ...ಯಾಕೆ ಅವರು ಕಾಯುತ್ತಿದ್ದಾರೋ...ಅವೈಜ್ಞಾನಿಕವೆನಿಸಿದರೂ ಹೇಳು, ಈ ಬಾರಿ ನಾನು ನಂಬುತ್ತೇನೆ" ಎಂದು ಕಣ್ಣರಳಿಸಿ ಡಾ.ದೇಸಾಯಿ ಆಗ್ರಹಿಸಿದರು.

"ಸರಿ ಹಾಗಾದರೆ..." ಅವಿನಾಶ್ ನುಡಿದ. "ಆಗಿನ ಕಾಲದಲ್ಲಿ ಲೆಮೂರಿಯನ್ನರು ಬೇರೆಯೇ ಆದರ್ಶಗಳಿಂದ ಜೀವನ ಕಟ್ಟಿಕೊಂಡಿದ್ದರು.. ಈ ಭೂಮಿ ಇದೇ ಗ್ರಹವಾದರೂ, ಬೇರೆ ನೆಲವಾಗಿತ್ತು...ಈ ಧರೆಯ ನೀತಿ ನಿಯಮಗಳೇ ಬೇರೆ ಇದ್ದವು.

ಅವರು ಚಿನ್ನವನ್ನು ಸಾಮಾಜಿಕ ಕಲ್ಯಾಣಕ್ಕಾಗಿ ಉಚಿತವಾಗಿ ತಮ್ಮ ರಕ್ಷಣೆ ಮತ್ತು ಜೀವನಶೈಲಿಗೆ ಬೇಕಾದಷ್ಟು ಮಾತ್ರ ಬಳಸುತ್ತಿದ್ದರು. ಆಗ ನೆಲದಡಿ ಅದು ಯಥೇಚ್ಚವಾಗಿ ಸಹಾ ದೊರಕುತ್ತಿತ್ತು... ಆದರೆ ಈಗಿನ ಕಾಲದ ಮಾನವ ಇದನ್ನು ಕೊಳ್ಳೆ ಹೊಡೆಯುತ್ತಾನೆ, ತನ್ನ ಸ್ವಾರ್ಥಕ್ಕೆಂದು ಬಚ್ಚಿಡುತ್ತಾನೆ, ಸಂಪತ್ತು ವೃದ್ಧಿಸಿಕೊಳ್ಳುತ್ತಾನೆ...ಲೋಭದಿಂದ ಖಾಸಗಿ ಪ್ರಯೋಜನ ಮಾತ್ರ ಪಡೆಯುತ್ತಿದ್ದಾನೆ ಇದರಲ್ಲಿ ಯಾವುದೇ ಲೋಕಕಲ್ಯಾಣದ ಉದ್ದೇಶವಿಲ್ಲ ಅಲ್ಲವೆ ಸರ್?...ದ ವರ್ಲ್ಡ್ ದೆನ್ ವಾಸ್ ಎ ಡಿಫರೆಂಟ್ ಪ್ಲೇಸ್.. ಅವರು ಇಂದಿಗೂ ನಮ್ಮನ್ನು ಗಮನಿಸುತ್ತಿದ್ದಾರೆನ್ನುತ್ತಾರೆ.. ಹಾಗೆಯೇ ಇದನ್ನು ನಾವು ಕದ್ದು ತರಲು ಸಾಧ್ಯವಾಗದಂತೆ ಅವರು ತಮ್ಮ ಶಕ್ತಿಗಳನ್ನು ಬಳಸಿಕೊಂಡು ತಡೆಯುತ್ತಾರೆ. ಅಂದರೆ ಅವರ ಪ್ರಕಾರ ಈಗಿನ ಭೂಮಿಯಲ್ಲಿ ಏನು ಎಷ್ಟು ಸಂಪನ್ಮೂಲಗಳು ಪ್ರಕೃತಿದತ್ತವಾಗಿದೆಯೋ ಅದರ ಮೇಲೆ ಮಾತ್ರ ನಮ್ಮ ಉತ್ತರಾಧಿಕಾರವಿದೆ..ಅವರ ಕಾಲದ ನಿಧಿಯ ಮೇಲೆ ನಮ್ಮ ಹಕ್ಕಿಲ್ಲ...ಹೀಗೆ ಒಂದು ನಂಬಿಕೆಯಿದೆ, ಸರ್!"

"ಈಗಿನ ಸಂಪನ್ಮೂಲಗಳು ಮಾತ್ರ ನಮಗೆ... ಅವರ ನಿಷ್ಕಲ್ಮಶ ನಿಸ್ವಾರ್ಥ ಮಾರ್ಗದ ಆ ಕಾಲದ ಆಸ್ತಿ ನಮಗೆ ದಕ್ಕುವುದಿಲ್ಲ... ಈಗಿನ ಸಂಪನ್ಮೂಲಗಳನ್ನು ಜವಾಬ್ದಾರಿಯಿಂದ ಕಾಪಾಡಿಕೊಂಡು ಬಳಸದಿದ್ದರೆ ನಮ್ಮ ಭೂಮಿ ಒಂದಿನ ಬರಡಾಗುವುದು...ಇದನ್ನು ನಮ್ಮ ಪ್ರಕೃತಿ ಸಂರಕ್ಷಣಾವಾದಿಗಳು, ಪರಿಸರದ ಬಗ್ಗೆ ಕಾಳಜಿಯಿಂದ ಎಚ್ಚರಿಸುತ್ತಲೇ ಇದ್ದಾರೆ..." ಎಂದು ಡಾ. ದೇಸಾಯಿ ನಿಧಾನವಾಗಿ ತಲೆದೂಗಿದರು. "ಇದೆನ್ನೆಲ್ಲಾ ನಿನಗೆ ಯಾರು ಹೇಳಿದ್ದರು, ಅವಿನಾಶ್?"

ಇದನ್ನೆಲ್ಲ ಒಮ್ಮೆ ತನ್ನ ಬಾಸ್ ಕೇಳಿಯಾರೆಂದು ಅವನು ನಂಬಿಯೇ ಇರಲಿಲ್ಲ. ಅವಿನಾಶ್ ಮುಗುಳ್ನಕ್ಕು ಹೇಳಿದ,

"ಲೆಮೂರಿಯಾ ಗಾಥೆಯನ್ನು ಪ್ರಾಚೀನ ಬೌದ್ಧ ಧರ್ಮೀಯರು ಏಷ್ಯಾದಲ್ಲಿ ಜೀವಂತವಾಗಿಡುತ್ತಲೇ ಬಂದಿದ್ದರು...ಹಿಂದೂ ಮಹಾಸಾಗರದಲ್ಲಿ ಮಾಲ್ದೀವ್ಸ್ ಬಳಿಯ ಚಿಕ್ಕ ದ್ವೀಪದಲ್ಲಿ ಬೌದ್ಧ ಧರ್ಮೀಯರ ಪ್ರಾಚೀನ ತಾಳೆಗರಿ ಮತ್ತು ಕೆತ್ತನೆಗಳಲ್ಲಿ ಹೇಳಿದ್ದ ಈ ಸಂಗತಿಗಳು ಬ್ರಿಟಿಷ್ ಸರಕಾರದ ಗಮನಕ್ಕೆ ಬಂದಿತು ಸರ್...ಅದನ್ನು ಅದೃಷ್ಟವಶಾತ್ ನಾನು ಒಮ್ಮೆ ಓದಿಬಿಟ್ಟೆ.. ಆಮೇಲೆ ಅದನ್ನು ಟಾಪ್ ಸೀಕ್ರೆಟ್ ಫೈಲ್ ಎಂದು ಎಲ್ಲಿಯೋ ಅಡಗಿಸಿಬಿಟ್ಟರು ಸರ್. ಇಂತದ್ದೆಲ್ಲಾ ನಿಮಗೇ ಗೊತ್ತಲ್ಲ?... ಸರಕಾರಗಳಿಗೆ ಇದೆಲ್ಲಾ ಅಪ್ರಿಯ ಸತ್ಯ ಅಥವಾ ಯಾರಿಗೂ ಇಷ್ಟವಾಗದ ಅವಾಸ್ತವಿಕ ವಾದ...ಹಾಗಾಗಿ.."

"ಸರಿ, ಅವಿನಾಶ್...ನೀನು ಹೋಗಿ ಬಾ..."ಎಂದು ಅವರು ಕೊನೆಗೆ ಅವನನ್ನು ಬೀಳ್ಕೊಟ್ಟರು.

ಅವಿನಾಶ್ ಈ ವರದಿ ಒಪ್ಪಿಸಿ ಎದ್ದುಹೋದ ಮೇಲೂ ಅವರು ಆ ಫೈಲಿನಲ್ಲಿದ್ದ ಲೆಮೂರಿಯಾ/ ಕುಮರಿಕಂಡಂ ನಕ್ಷೆಯನ್ನು ದಿಟ್ಟಿಸುತ್ತಲೇ ಇದ್ದರು...

’ತಾನೇನಾದರೂ ಆ ಕಾಲದಲ್ಲಿ ಲೆಮೂರಿಯಾದಲ್ಲಿ ಹುಟ್ಟಿದ್ದವ ಈಗ ಪುನರ್ಜನ್ಮ ಪಡೆದಿದ್ದೇನೆಯೆ? ತನಗೇಕೆ ಯಾರೂ ನಂಬದ ಈ ಜಾನಪದ ಕಥೆಯ ಮೇಲಿಷ್ಟು ಆಲೋಚನೆ?’ ಎಂಬ ಯೋಚನೆ ಡಾ. ದೇಸಾಯರ ಮನದಲ್ಲಿ ಹಾದುಹೋಯಿತು.

ಆದಕ್ಕೇ ಅವರ ಮುಖದಲ್ಲಿ ಮಂದಹಾಸ ಮಿನುಗಿತು.

(ಮುಗಿಯಿತು)

———————————————————*